ಮೊದಲ ಪುಟದಿಂದ

## ಖುಷಿಯಾಗಿರಲಿ: ಬೇಳೂರು

ಅಸಮಾಧಾನ ಹೊರಹಾಕಿದರು. ರಾಜೀನಾಮೆ ನೀಡುವವರನ್ನು ತಕ್ಷಣವೇ ಪರಿಗಣಿಸಿ ಎಂದಿದ್ದಕ್ಕೆ ನಾನೇನು ಭಯಪಟ್ಟಿಲ್ಲ. ಸಿಎಂ ನಿಮ್ಮ ಜತೆ ಇದ್ದೇನೆ ಎಂದು ಹೇಳಿದ್ದಾರೆ. ಅವರಿಗಾಗಿ ನಾನು ರಾಜೀನಾಮೆ ನಿರ್ಣಯವನ್ನು ವಾಪಾಸ್ ಪಡೆದುಕೊಂಡಿದ್ದೇನೆ ಎಂದರು.

## ಕೆಆರ್‌ಎಸ್ 104 ಅಡಿಗೆ ಏರಿಕೆ

ಸಂಗ್ರಹವಾಗಿದೆ. ಶೇ 52ರಷ್ಟು ನೀರು ಲಭ್ಯವಿದೆ. ಜಲಾಶಯದಲ್ಲಿ 49.45 ಟಿಎಂಸಿ ನೀರು ಸಂಗ್ರಹಿಸುವ ಸಾಮರ್ಥ್ಯವಿದ್ದು, ಕಳೆದ ವರ್ಷ ಇದೇ ದಿನ 46.76 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ನೀರಿನ ಮಟ್ಟ 103.40 ಅಡಿಯನ್ನು ದಾಟಿದೆ. ಕಳೆದ ವರ್ಷ ಈ ಹೊತ್ತಿಗೆ ಜಲಾಶಯ ಭರ್ತಿಯಾಗಿ ಒಂದು ತಿಂಗಳೇ ಕಳೆದಿತ್ತು. ಜಲಾಶಯದಲ್ಲಿ 122.84 ಅಡಿ ನೀರು ಸಂಗ್ರಹವಿತ್ತು. ಇದೇ ಜುಲೈ 30ರಂದು ಜಲಾಶಯದಲ್ಲಿ 17.25 ಟಿಎಂಸಿ ನೀರು ಸಂಗ್ರಹವಾಗಿ ಶೇ 35ರಷ್ಟು ಮಾತ್ರ ಭರ್ತಿಯಾಗಿತ್ತು. ನಾಲ್ಕೈದು ದಿನದಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವುದರಿಂದ ನೂರರ ಗಡಿ ದಾಟಿದೆ. ಕೃಷ್ಣರಾಜ ಸಾಗರ ಜಲಾಶಯಕ್ಕೆ ಈ ಬಾರಿ ಹೆಚ್ಚಿನ ನೀರ ಹರಿದು ಬರಲು ಕೊಡಗಿನ ಹಾರಂಗಿ ಜಲಾಶಯವೂ ನೆರವಾಗಿದೆ. ಹಾರಂ ಗಿಯಿಂದ 6291 ಕ್ಯೂಸೆಕ್ ನೀರನ್ನು ಹರಿಬಿಡಲಾಗುತ್ತಿದೆ. ಹಾರಂಗಿ ಜಲಾಶಯದಲ್ಲಿ 7,90 ಟಿಎಂಸಿ ನೀರು ಸಂಗ್ರಹವಾಗಿದೆ. ಶೇ 93ರಷ್ಟು ನೀರು ಲಭ್ಯವಿದೆ. ಕಾವೇರಿ ಕಣಿವೆಯ ಪ್ರಮುಖ ಜಲಾಶಯಗಳಲ್ಲಿ ಕಬಿನಿ ಜಲಾಶಯ ಈಗಾಗಲೇ ಭರ್ತಿಯಾಗಿದೆ. ಜಲಾಶಯಕ್ಕೆ 27988 ಕ್ಯೂಸೆಕ್ ನೀರು ಹರಿದು ಬರುತ್ತಿದೆ. 27 ಸಾವಿರ ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ. ಜಲಾಶಯದಲ್ಲಿ 25.59 ಟಿಎಂಸಿ ನೀರಿನೊಂದಿಗೆ ಶೇ.96ರಷ್ಟು ನೀರು ಸಂಗ್ರಹವಾಗಿದೆ. ಸದ್ಯ 2282.71 ಅಡಿ ನೀರು ಸಂಗ್ರಹವಿದೆ. ಹೇಮಾವತಿ ಜಲಾಶಯಕ್ಕೆ ಸದ್ಯ 5041 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಜಲಾಶಯದಲ್ಲಿ 28.41 ಟಿಎಂಸಿ ನೀರಿದೆ. ಶೇ 77ರಷ್ಟು ಭರ್ತಿಯಾಗಿದೆ. ಜಲಾಶಯದ ನೀರಿನ ಮಟ್ಟವು 2912.24 ಅಡಿಯಷ್ಟಿದೆ.

## ಸಿದ್ದರಾಮಯ್ಯಗೆ ಅಸಮಾಧಾನ ಆಗಿಲ್ಲ

ಮಾತನಾಡಿ, ಮಹಿಳೆಯರಿಗೂ ಒಂದು ಸಚಿವ ಸ್ಥಾನ ನೀಡಲಾಗುತ್ತದೆ. ಕೊನೆಯ ಕ್ಷಣದಲ್ಲಿ ಒಂದು ಸ್ಥಾನವನ್ನು ಖಾಲಿ ಇಡಲಾಗಿದೆ. ಈ ಬಗ್ಗೆ ಅಂತಿಮ ತೀರ್ಮಾನವನ್ನು ಹೈಕಮಾಂಡ್ ತೆಗೆದುಕೊಳ್ಳಲಿದೆ ಎಂದರು. ಕುರುಬ ಸಮುದಾಯದ ಇಬ್ಬರಿಗೆ ಹಾಗೂ ಅಲ್ಪಸಂಖ್ಯಾತ ಸಮುದಾಯದ ಮೂವರಿಗೆ ಸಚಿವ ಸ್ಥಾನ ನೀಡಲಾಗಿದೆ. ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಲವರಿಗೆ ಸಚಿವ ಸ್ಥಾನ ಸಿಗದಿರಬಹುದು. ಆದರೆ, ಅವರಿಗೆ ನೀಡಲು ಇನ್ನೂ ಹಲವು ನಿಗಮ-ಮಂಡಳಿ ಸೇರಿದಂತೆ ವಿವಿಧ ಸ್ಥಾನಮಾನಗಳಿವೆ. ಇರುವ 34 ಸಚಿವ ಸ್ಥಾನಗಳಲ್ಲೇ ಸಮುದಾಯ, ಪ್ರಾದೇಶಿಕ ಸಮತೋಲನ ಹಾಗೂ ಹೊಸಬರಿಗೂ ಅವಕಾಶ ಕಲ್ಪಿಸಬೇಕಾಗುತ್ತದೆ ಎಂದು ಹೇಳಿದರು.ಯಾವ ಸರ್ಕಾರಕ್ಕೂ ಶೇ.100ರಷ್ಟು ಪ್ರಾತಿನಿಧ್ಯ ನೀಡಲು ಸಾಧ್ಯವಿಲ್ಲ. ಎಂದರು.

## ವಂಚಿತರ ಅಸಮಾಧಾನ ಸ್ಫೋಟ

ಈಗ ಅಸಮಾಧಾನಿತ ಶಾಸಕರಿಗೆ ಪ್ರಮುಖ ನಿಗಮ- ಮಂಡಳಿಗಳ ಅಧ್ಯಕ್ಷ ಸ್ಥಾನವನ್ನು ನೀಡಿ, ಅವರಿಗೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡುವ ಹೊಸ ಸರ್ಕಸ್ ಅನ್ನು ಸರ್ಕಾರ ಪ್ರಾರಂಭಿಸಿದೆ. ಅದಕ್ಕೂ ಮೊದಲು ಈಗಿರುವ ನಿಗಮ- ಮಂಡಳಿ ಅಧ್ಯಕ್ಷರನ್ನು ವಜಾ ಮಾಡಬೇಕಿದೆ. ಇದು ಮತ್ತಷ್ಟು ಅಸಮಾಧಾನಕ್ಕೆ ಕಾರಣವಾಗಲಿದೆ ಎಂದು ನಿರೀಕ್ಷಿಸಲಾಗಿದೆ

## ರಾಜೀನಾಮೆ ನಿರ್ಧಾರ ಮಾಡಿಲ್ಲ

ಸದನದಲ್ಲಿ ಈ ಬಗ್ಗೆ ತೀರ್ಮಾನ ಆಗಲಿ. ಸದನದ ನಿರ್ಧಾರಕ್ಕೆ ನಾನು ಗೌರವ ಕೊಡ್ತೀನಿ. ಈ ವಿದ್ಯಾಮಾನ ನನಗೆ ನೋವು ತರಿಸಿದೆ. ಮೊದಲು ಅವರು ನೋಟೀಸ್ ಕೊಡಲಿ ಅಮೇಲೆ ಆ ಬಗ್ಗೆ ನಿರ್ಧಾರ ಮಾಡ್ತೀನಿ. ಸದನ ನಿರ್ಧಾರಕ್ಕೆ ನಾನು ಬದ್ಧ ಎಂದು ಹೇಳಿದರು. ಸಭಾಪತಿ ಹೊರಟ್ಟಿ ಅವರನ್ನ ಭೇಟಿ ಮಾಡಿದ ಸಚಿವ ಶರಣಪ್ರಕಾಶ್ ಪಾಟೀಲ್ ಕೆಲಕಾಲ ಮಾತುಕತೆ ನಡೆಸಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಸಭಾಪತಿ ರಾಜೀನಾಮೆ ಬಗ್ಗೆ ನಾನು ಮಾತಾಡಲ್ಲ. ಯಾವುದೋ ಮೀಟಿಂಗ್ ಇತ್ತು. ಆ ವಿಚಾರವಾಗಿ ಚರ್ಚೆ ಮಾಡಿದ್ದೇನೆ ಅಷ್ಟೆ. ರಾಜೀನಾಮೆ ಬಗ್ಗೆ ಚರ್ಚೆ ಮಾಡಿಲ್ಲ ಎಂದರು.

## ಸಿದ್ದುಗೂ ಬೇಸರ: ರಾಜೇಂದ್ರ

ಪರಿಣಾಮ ಬೀರುತ್ತದೆ. ಬೇಸರದಿಂದ ಪಕ್ಷ ಬಿಡುವ ಪ್ರಶ್ನೆ ಇಲ್ಲ. ಪಕ್ಷದ ಒಳಗೆ ಫೈಟ್ ಮಾಡುತ್ತೇವೆ ಎಂದು ತಿಳಿಸಿದರು

## ನಾಮಧಾರಿಗೌಡ ಯುವಕರ ಸಂಘಕ್ಕೆ ಚರಣ್ ಅಧ್ಯಕ್ಷ

ಸರಗೂರು: ಎಚ್ ಡಿ ಕೋಟೆ ಹಾಗೂ ಸರಗೂರು ತಾಲೂಕು ನಾಮಧಾರಿಗೌಡ ಯುವಕರ ಸಂಘದ ಅಧ್ಯಕ್ಷರಾಗಿ ಮಾಗುಡಿಲು ಗ್ರಾಮದ ಚರಣ್.ಎಂ.ಎನ್. ಅವರು ಆಯ್ಕೆಯಾಗಿದ್ದಾರೆ.

ಪಟ್ಟಣದ ನಾಮಧಾರಿಗೌಡ ಸಮುದಾಯ ಭವನದಲ್ಲಿ ಇತ್ತೀಚೆಗೆ ನಡೆದ ಸಂಘದ 16ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ



ನಾಗೇಂದ್ರ ಪ್ರಸಾದ್, ಕಾರ್ಯದರ್ಶಿಯಾಗಿ ಸುಬ್ರಹ್ಮಣ್ಯ, ನಿರ್ದೇಶಕರಾಗಿ ಸತ್ಯನಾರಾಯಣ ತುಂಬಸೋಗೆ, ಭರತ್ ಚಾಮರಾಜು ನಿಲುವಾಗಿಲು, ಮಹಾವೀರ ಗುಜ್ಜಪ್ಪನಹುಂಡಿ, ಪ್ರಶಾಂತ್ ಕೃಷ್ಣ ಹೈರಿಗೆ, ಸಂಜಯ್, ಪ್ರಕಾಶ್, ಸುನೀಲ್, ಮನ್ಮಥ್ ಆಯ್ಕೆಯಾಗಿದ್ದಾರೆ. ಸಂಘದ ಹಿರಿಯ ಸಲಹೆಗಾರರಾಗಿ ಶಿಕ್ಷಕ ರಾಘವೇಂದ್ರ ಬಾಡಗ, ಪದ್ಮರಾಜು ನಿಲುವಾಗಿಲು, ಅಭಿ ಪೆಂಜಹಳ್ಳಿ, ದೈಹಿಕ ಶಿಕ್ಷಣ ಶಿಕ್ಷಕ ರಾಘವೇಂದ್ರ, ವಕೀಲ ವೇಣುಗೋಪಾಲ್ ನೇಮಕವಾದರು.

ಸದಸ್ಯರಾಗಿ ಪುಟ್ಟರಾಜು, ಸತೀಶ್ ಗುಜ್ಜಪ್ಪನಹುಂಡಿ, ಮಾರುತಿ ಅಂತರಸಂತೆ, ಅಭಿಲಾಶ್ ಅಡಹಳ್ಳಿ, ಕೃಷ್ಣಪ್ಪ ಹಿರೇಹಳ್ಳಿ, ಪುನೀತ್ ಮಗ್ಗೆ, ಪಾರ್ಶ್ವನಾಥ ಹಳೆಯೂರು, ಉಪನ್ಯಾಸಕ ರವಿ, ಶ್ರೀನಿವಾಸ ಕಾಳೇಗೌಡನ ಹುಂಡಿ, ಮೋಹನ್ ಅಂತರಸಂತೆ, ಸುಬ್ರಮಣ್ಯ ಗದ್ದೆಹುಂಡಿ, ಕೆ.ಜಿ.ಹಳ್ಳಿ ಮಧು, ಪುನೀತ್, ಅಮಿತ್, ರಾಜ್ ಗೋಪಾಲ್, ನವೀನ್, ಪುನೀತ್ ಎಚ್ ಎನ್ ಹಿರೇಹಳ್ಳಿ, ಮಾಯಣ್ಣ ಚಕ್ಕೂರು, ಸ್ವಾಮಿ, ಜಗದೀಶ್ ಹಿರೇಹಳ್ಳಿ, ಚೇತನ್ ಬಾಡಗ, ಮಧು, ಶಮಂತ್ ಹೊಸಕೋಟೆ ಆಯ್ಕೆಯಾದರು ಎಂದು ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ರೈತರ ಪರ ಜೆಡಿಎಸ್ ಕಾನೂನು ಹೋರಾಟಕ್ಕೆ ಆರಂಭದ ಜಯ



ರಾಮನಗರ: ರೈತರ ಪರವಾಗಿ ಜೆಡಿಎಸ್ ಕಾನೂನು ಹೋರಾಟ ಆರಂಭಿಸಿದೆ. ಬಿಡದಿ ಸಮಗ್ರ ನಗರ ನಿರ್ಮಾಣ ಯೋಜನೆಗೆ ವಿರೋಧ ಇರುವ ರೈತರು ವಕಾಲತ್ತು ನೀಡಿದ್ದರು. ವಕಾಲತ್ತು ಹಾಕಿದ್ದ ರೈತರಿಗೆ ಇದೀಗ ತಾತ್ಕಾಲಿಕ ಜಯ ಸಿಕ್ಕಿದೆ. ಇದು ಟೌನ್ ಶಿಪ್ ವಿರುದ್ಧದ ಹೋರಾಟಕ್ಕೆ ಶುಭಸೂಚನೆಯಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ದಶ ಮಾತೃಕೆಯರ ಕರಗ ಮಹೋತ್ಸವದ ಹಿನ್ನೆಲೆಯಲ್ಲಿ ದೇವಾಲಯಗಳಿಗೆ ಭೇಟಿ ನೀಡಿದ್ದ ವೇಳೆ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಬಿಡದಿ ಸಮಗ್ರ ನಗರ ನಿರ್ಮಾಣ ಯೋಜನೆ ವ್ಯಾಪ್ತಿಯ ರೈತರಿಗೆ ಕರ್ನಾಟಕ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ. ಪರಿಹಾರದ ಮೊತ್ತ ನಿಗದಿಯಾಗುವವರೆಗೂ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸದಂತೆ ಕೋರ್ಟ್ ಸರ್ಕಾರಕ್ಕೆ ಸೂಚಿಸಿದೆ ಎಂದು ತಿಳಿಸಿದರು. ಇನ್ನುಳಿದ ಗ್ರಾಮಗಳ ರೈತರ ವಕಾಲತ್ತು ಪತ್ರಗಳನ್ನು ಸಹ ಕೋರ್ಟ್‌ಗೆ ಸಲ್ಲಿಸಲಾಗಿದ್ದು, ಶುಕ್ರವಾರ ಆ ಪ್ರಕರಣದ ವಿಚಾರಣೆ ನಡೆಯುವ ಸಾಧ್ಯತೆ ಇದೆ ಎಂದರು. .ಈ ವೇಳೆ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ನಗರಸಭಾ ಸದಸ್ಯ ಮಂಜುನಾಥ್, ಪ್ರಮುಖರಾದ ಬಿ.ಉಮೇಶ್, ಗೂಳಿಗೌಡ, ಮಾವಿನಸಸಿ ವೆಂಕಟೇಶ್, ನರಸಿಂಹಮೂರ್ತಿ, ಎ.ರವಿ, ಜೆ.ಮುಕುಂದರಾಜ್, ಜಯಕುಮಾರ್, ಪಾಂಡುರಂಗ ಉಪಸ್ಥಿತರಿದ್ದರು.

### ಅಸಮಾಧಾನಿತರಿಂದ ರಾಜೀನಾಮೆ ಕುರಿತು

ಸಚಿವ ಸ್ಥಾನ ಸಿಗದಿದ್ದಕ್ಕೆ ಕೆಲ ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡುವ ಬೆದರಿಕೆ ಹಾಕಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಇದು ಸರ್ಕಾರಕ್ಕೆ ಮತ್ತು ಆ ಪಕ್ಷಕ್ಕೆ ಬಿಟ್ಟ ವಿಚಾರ. ಯಾರನ್ನು ಸಚಿವರನ್ನಾಗಿ ಮಾಡಬೇಕು ಎಂಬುದು ಅವರ ತೀರ್ಮಾನ. ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಕೆಲ ಹಿರಿಯ ಶಾಸಕರು ಅಸಮಾಧಾನಗೊಂಡಿದ್ದಾರೆ. ಆ ರಾಜೀನಾಮೆಗಳು ಅಂಗೀಕಾರವಾಗುತ್ತವೆಯೇ ಅಥವಾ ಇದು ಬ್ಲಾಕ್‌ಮೇಲ್ ತಂತ್ರವೇ ಎಂಬುದನ್ನು ಕಾದು ನೋಡಬೇಕು ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು

### 2013ರ ಕಾಯ್ದೆ ಉಲ್ಲಂಘನೆ

ಸರ್ಕಾರವು ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ಯೋಜನೆ ಜಾರಿಗೆ ಮುಂದಾಗಿದೆ ಎಂದು ಆರೋಪಿಸಿದ ನಿಖಿಲ್, ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದ 2013ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಈ ಯೋಜನೆ ಜಾರಿಯಾಗುತ್ತಿಲ್ಲ. ಶೇ80ರಷ್ಟು ಮಂದಿ ಒಪ್ಪಿದರೆ ಮಾತ್ರ ಭೂಸ್ವಾಧೀನಕ್ಕೆ ಸರ್ಕಾರ ಮುಂದಾಗ ಬೇಕು. ಆದರೂ ಅದೇ ಕಾಯ್ದೆಯನ್ನು ಉಲ್ಲೇಖಿಸಿ ಸರ್ಕಾರ ಮುಂದುವರೆಯುತ್ತಿದೆ. ಕೋರ್ಟ್ ಎಲ್ಲವನ್ನೂ ಗಮನಿಸುತ್ತಿದೆ. ಅಂತಿಮವಾಗಿ ರೈತರ ಪರವಾಗಿಯೇ ತೀರ್ಪು ಬರಲಿದೆ ಎಂಬ ವಿಶ್ವಾಸ ನಮಗಿದೆ ಎಂದರು. ಟೌನ್ ಶಿಪ್ ಯೋಜನೆ ಜಾರಿಗೆ ಜಿಬಿಡಿಎ ಬಳಿ ಸಾಕಷ್ಟು ಹಣವೇ ಇಲ್ಲ. ಬಿಎಂಆರ್‌ಡಿಎ ಆಸ್ತಿಯನ್ನು ಅಡಮಾನ ಇಟ್ಟು ಸ್ವಲ್ಪ ಹಣ ಸಂಗ್ರಹಿಸಲಾಗಿದೆ. ಸರ್ಕಾರದ ಬೊಕ್ಕಸವೂ ಖಾಲಿಯಾಗಿದೆ. ಕೆಲವರಿಗೆ ಚೆಕ್ ನೀಡಿ ರೈತರನ್ನು ಆಕರ್ಷಿಸುವ ತಂತ್ರ ಸರ್ಕಾರದ್ದು. ಆದರೆ ಯಾವುದೇ ಕಾರಣಕ್ಕೂ ರೈತರು ಭೂಮಿ ನೀಡುವುದಿಲ್ಲ ಎಂದು ನಿಖಿಲ್ ಅವರು ಸ್ಪಷ್ಟಪಡಿಸಿದರು. ಯಾರು ಮಂತ್ರಿ ಆದರೂ, ಮುಖ್ಯಮಂತ್ರಿ ಆದರೂ ರೈತರ ವಿರುದ್ಧ ಹೋಗಬಾರದು ಎಂದು ನಿಖಿಲ್ ಕುಮಾರಸ್ವಾಮಿ ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

# ಮಾನವ ಕಳ್ಳಸಾಗಾಣಿಕೆ ಘೋರ ಅಪರಾಧ

## ಪ್ರಧಾನ ಜಿಲ್ಲಾ ನ್ಯಾ.ಹೇಮಾವತಿ ಹೇಳಿಕೆ | 'ಮಾನವ ಕಳ್ಳಸಾಗಾಣಿಕೆ ತಡೆ ದಿನಾಚರಣೆ

ಹಾಸನ: ಮಾನವ ಕಳ್ಳಸಾಗಾಣಿಕೆಯು ಒಂದು ಘೋರ ಅಪರಾಧವಾಗಿದ್ದು, ಪ್ರಪಂಚದ ಪ್ರತಿಯೊಂದು ಪ್ರಾಂತದ ಮೇಲೆಯೂ ದುಷ್ಪರಿಣಾಮ ಬೀರುತ್ತಿದೆ. ಇದು ಸಮಾಜದಲ್ಲಿ ಅಸಮಾನತೆ, ತಾರತಮ್ಯ ಮತ್ತು ದುರ್ಬಲತೆಗೆ ಪ್ರಮುಖ ಕಾರಣವಾಗಿದೆ ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ಹೇಮಾವತಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್, ಆರೋಗ್ಯ, ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಶಾಲಾ ಶಿಕ್ಷಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ 'ಮಾನವ ಕಳ್ಳಸಾಗಾಣಿಕೆ ತಡೆ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಾನವ ಸಾಗಾಣಿಕೆದಾರರು ಜನಸಾಮಾನ್ಯರ ಮೂಲಭೂತ ಹಕ್ಕುಗಳನ್ನು ದರೋಡೆ ಮಾಡುತ್ತಿದ್ದು, ಲೈಂಗಿಕ ದೌರ್ಜನ್ಯ, ಭಿಕ್ಷಾಟನೆ ಹಾಗೂ ಕಾನೂನುಬಾಹಿರ ಅಂಗಾಂಗ ಜೋಡಣೆಗಾಗಿ ಮಹಿಳೆಯರು ಮತ್ತು ಮಕ್ಕಳನ್ನು ಅಕ್ರಮ ಸಾಗಾಣಿಕೆಗೆ ಒಳಪಡಿಸಲಾಗುತ್ತಿದೆ. ಈ ಪಿಡುಗನ್ನು ತಡೆಗಟ್ಟಿ ಸಂತ್ರಸ್ತರಿಗೆ ರಕ್ಷಣೆ ನೀಡುವುದು ಎಲ್ಲರ ಕರ್ತವ್ಯವಾಗಿದೆ ಎಂದರು.



### ಜೀತ ಪದ್ಧತಿ ನಿರ್ಮೂಲನೆ, ಶಾಸನಾತ್ಮಕ ನೆರವು

ಸಮಾಜದಲ್ಲಿ ಆಳವಾಗಿ ಬೇರೂರಿರುವ ಜೀತ ಪದ್ಧತಿಯಲ್ಲಿ ಪ್ರಸ್ತುತ 18 ವರ್ಷದೊಳಗಿನ ಮಕ್ಕಳನ್ನು ಹೆಚ್ಚಾಗಿ ತೊಡಗಿಸಿಕೊಳ್ಳಲಾಗುತ್ತಿದ್ದು, ಅಂತಹ ಮಕ್ಕಳನ್ನು ಇಲಾಖೆಗಳ ಮೂಲಕ ಗುರುತಿಸಿ ಪುನರ್ವಸತಿ ಕಲ್ಪಿಸಲಾಗುತ್ತಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ತಿಳಿಸಿದರು. ಕೃತ್ಯ ಎಸಗುವ ವ್ಯಕ್ತಿಗಳಿಗೆ ಕಾನೂನಿನಲ್ಲಿ ಕಠಿಣ ಶಿಕ್ಷೆಯಿದ್ದು, ಸಂತ್ರಸ್ತರಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಉಚಿತ ಕಾನೂನು ನೆರವು ದೊರೆಯಲಿದೆ. ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಮಾತನಾಡಿ, ಮಾನವ ಕಳ್ಳಸಾಗಾಣಿಕೆ ತಡೆಯುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಸಮಾಜದಲ್ಲಿ ಅನುಮಾನಾಸ್ಪದ ಚಟುವಟಿಕೆಗಳು ಕಂಡುಬಂದರೆ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವ ಮೂಲಕ ದೊಡ್ಡ ಅನಾಹುತಗಳನ್ನು ತಡೆಯಬಹುದು ಎಂದು ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ಕರೆ ನೀಡಿದರು.

### ಸಮಾರೋಪ ಮತ್ತು ಗಣ್ಯರ ಉಪಸ್ಥಿತಿ

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಮಾತನಾಡಿ, ಮಾನವ ಸಾಗಾಣಿಕೆದಾರರನ್ನು ಕಾನೂನಿನ ಚೌಕಟ್ಟಿಗೆ ತರುವುದರ ಜೊತೆಗೆ ಸಂತ್ರಸ್ತರಿಗೆ ಸುರಕ್ಷಿತ ಪುನರ್ವಸತಿ ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದರು. ಹಿರಿಯ ವಕೀಲ ಬಿ.ಚಂದ್ರಶೇಖರ್ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದಾಗ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನೆ ಮಾಡಲು ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕಿ ಸುನೀತ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

### ಜಾಗೃತಿ ಮತ್ತು ಸ್ವಯಂ ರಕ್ಷಣೆಯ ಅಗತ್ಯತೆ

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಣಿ ಜಿ.ಕೆ. ಮಾತನಾಡಿ, ಸಮಾಜದಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಪ್ರತಿಯೊಬ್ಬರೂ ಜಾಗೃತಿಯಿಂದ ಇರಬೇಕು. ಮಾನವ ಕಳ್ಳಸಾಗಾಣಿಕೆಯು ಕೇವಲ ಅವಿದ್ಯಾಜಟಿಭಿಂಜಜಜವಂತರಿಂದ ಮಾತ್ರ ನಡೆಯುತ್ತಿಲ್ಲ, ವಿದ್ಯಾಜಟಿಭಿಂಜಜಜವಂತರೂ ಈ ಕೃತ್ಯದಲ್ಲಿ ಭಾಗಿಯಾಗುತ್ತಿದ್ದಾರೆ. ಮಾನವ ಅಂಗಾಂಗಗಳ ಮಾರಾಟವೇ ಇದರ ಮುಖ್ಯ ಉದ್ದೇಶವಾಗಿದ್ದು, ಪೋಷಕರು ಮಕ್ಕಳನ್ನು ನಿರ್ಭೀತಿಯಿಂದ ಹೊರಗೆ ಕಳುಹಿಸುವುದು ಕಷ್ಟಕರವಾಗಿದೆ. ಪ್ರತಿಯೊಬ್ಬರೂ ಆಕರ್ಷಣೆಗಳಿಗೆ ಒಳಗಾಗದೆ ಜಾಗರೂಕರಾಗಿದ್ದಾಗ ಶೋಷಣೆಯಿಂದ ತಪ್ಪಿಸಿಕೊಳ್ಳಬಹುದು ಎಂದರು.

### ದುರಾಶೆ ಮತ್ತು ಮಕ್ಕಳ ದಾರಿ ತಪ್ಪುವಿಕೆ

ಜನರಲ್ಲಿ ಹೆಚ್ಚುತ್ತಿರುವ ಅತಿಯಾದ ಆಸೆ ಹಾಗೂ ಸಾಮರ್ಥ್ಯ ಮೀರಿ ಬದುಕುವ ಭಾವನೆಗಳು ಅಪರಾಧಗಳಿಗೆ ದಾರಿ ಮಾಡಿಕೊಡುತ್ತಿವೆ ಎಂದು ನ್ಯಾಯಾಧೀಶರು ಕಳವಳ ವ್ಯಕ್ತಪಡಿಸಿದರು. ಪೋಷಕರು ಮಕ್ಕಳ ಆಸೆಗಳನ್ನು ಪೂರೈಸಲು ಸಾಧ್ಯವಾಗದಿದ್ದಾಗ, ಅಪ್ರಾಪ್ತ ವಯಸ್ಸಿನ ಮಕ್ಕಳು ದಾರಿ ತಪ್ಪಿ ಅಪರಿಚಿತರ ಜೊತೆ ತೆರಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮಕ್ಕಳು ಪೋಷಕರಿಗೆ ಮತ್ತು ಶಿಕ್ಷಕರಿಗೆ ತಿಳಿಸದೆ ತೆರಳಿ ವಿಳಾಸವೇ ಸಿಗದಂತೆ ನಾಪತ್ತೆಯಾಗುತ್ತಿರುವ ಬಗ್ಗೆ ಪ್ರತಿಯೊಬ್ಬರೂ ಪ್ರತಿದಿನ ಯೋಚಿಸಬೇಕಾಗಿದೆ. ಸಂವಿಧಾನಾತ್ಮಕವಾಗಿ ಸಿಗಬೇಕಾದ ಶಿಕ್ಷಣದ ಹಕ್ಕು ಪ್ರತಿಯೊಬ್ಬರಿಗೂ ತಲುಪುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕಿದ್ದು, ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯನ್ನು ಅವಲೋಕಿಸಬೇಕಿದೆ. ಬಡವರು ಹಾಗೂ ಕೂಲಿ ಕಾರ್ಮಿಕರ ಮಕ್ಕಳು ಶಿಕ್ಷಣ ಪಡೆದು ಮುಂದೆ ಬರುತ್ತಿರುವುದು ಸಂತೋಷದ ಸಂಗತಿ ಎಂದರು.

ಮೊದಲ ಪುಟದಿಂದ

## ಸಿಎಂ ಬದಲಿಸಿದ ಪರಿಣಾಮ ತಿಳಿದಿದೆ?

ಸಹಜ. ಆದರೆ ಅಸಮಾಧಾನ ಅಥವಾ ಬಂಡಾಯ ಪಕ್ಷದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಎಲ್ಲರೂ ಪಕ್ಷದ ಹಿತದೃಷ್ಟಿಯಿಂದ ನಡೆದುಕೊಳ್ಳಬೇಕು. ಸಿದ್ದರಾಮಯ್ಯ ಪ್ರಮಾಣವಚನಕ್ಕೆ ಉದ್ದೇಶಪೂರ್ವಕವಾಗಿ ಗೈರಾಗಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ ಎಂದರು. ಸಚಿವ ಸ್ಥಾನ ಸಿಗದೆ ಅಸಮಾಧಾನಗೊಂಡಿರುವ ಶಾಸಕರು ರಾಜೀನಾಮೆ ನೀಡಿದರೆ ಅದನ್ನು ಅಂಗೀಕರಿಸುವಂತೆ ಹೈಕಮಾಂಡ್ ಸೂಚನೆ ನೀಡಿರುವ ವಿಚಾರಕ್ಕೆ ಹೈಕಮಾಂಡ್ ಅಂತಹ ಸೂಚನೆ ನೀಡಿದ್ದರೆ, ಅದರಂತೆ ಮುಖ್ಯಮಂತ್ರಿ ನಡೆದುಕೊಳ್ಳಬೇಕು. ಹೈಕಮಾಂಡ್ ತೀರ್ಮಾನವನ್ನು ನಾವು ಪ್ರಶ್ನಿಸಲು ಸಾಧ್ಯವೇ ಎಂದು ರಾಜಣ್ಣ ಹೇಳಿದರು. ಸಚಿವ ಸಂಪುಟ ವಿಸ್ತರಣೆಯಲ್ಲಿ ಜಿಲ್ಲಾವಾರು ಪ್ರಾತಿನಿಧ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿತ್ತು. ಕೋಲಾರ ಜಿಲ್ಲೆಗೆ ಯಾರಿಗೂ ಸಚಿವ ಸ್ಥಾನ ನೀಡಿಲ್ಲ. ಕೆಲವು ಜಿಲ್ಲೆಗಳಿಗೂ ಪ್ರಾತಿನಿಧ್ಯ ಸಿಕ್ಕಿಲ್ಲ. ಇದರಿಂದ ಆ ಜಿಲ್ಲೆಗಳ ಅಭಿವೃದ್ಧಿ ಹಾಗೂ ಆಡಳಿತದ ಮೇಲೂ ಪರಿಣಾಮ ಬೀರಬಹುದು ಎಂದು ಅಭಿಪ್ರಾಯಪಟ್ಟರು.

## ತಕ್ಷಣ ರಾಜೀನಾಮೆ ಅಂಗೀಕಾರ

ಮಾಡುವುದಾಗಿ ಅವರು ಆದೇಶ ಹೊರಡಿಸಿದ್ದಾರೆ. ಸಚಿವ ಸ್ಥಾನ ತಪ್ಪಿದ ಬೆನ್ನಲ್ಲೇ ಹಲವು ಶಾಸಕರು ರಾಜೀನಾಮೆ ನೀಡುವುದಾಗಿ ಘೋಷಿಸಿದ್ದರು. ಈ ಬಗ್ಗೆ ಬೆಂಬಲಿಗರ ಜೊತೆ ಚರ್ಚಿಸಿ ತೀರ್ಮಾನ ಮಾಡುವುದಾಗಿ ತಿಳಿಸಿದ್ದರು. ಈಗ ಅಸಮಾಧಾನಿತ ಶಾಸಕರು ರಾಜೀನಾಮೆ ಕೊಟ್ಟರೆ ಅಂಗಿಕರಿಸುವಂತೆ ಸೂಚಿಸಿರುವುದು ಭಾರೀ ಕುತೂಹಲಕ್ಕೆ ಕಾರಣವಾಗಿದೆ.

# ನ್ಯಾಯಕ್ಕಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸೋಣ



**ಸರಗೂರು:** ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ಲಕ್ಷ್ಮಿನಾರಾಯಣ ನಾಗವಾರ ಸ್ಥಾಪಿತ ಬಣ)ದ ತಾಲೂಕು ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸರಗೂರು ತಾಲೂಕು ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಸಂಘಟನೆಯ ಬಲವರ್ಧನೆ, ತಾಲೂಕು ವಿವಿಧ ಸಮಸ್ಯೆಗಳ ಬಗ್ಗೆ ಮೈಸೂರು ವಿಭಾಗದ ವಿಭಾಗಿಯ ಸಂಚಾಲಕರಾದ ರಾಜಶೇಖರ್ ಕೋಟೆ ಅಧ್ಯಕ್ಷತೆಯಲ್ಲಿ ಅನೇಕ ವಿಚಾರಗಳನ್ನು ಚರ್ಚಿಸಲಾಯಿತು.

ನೂತನ ಪದಾಧಿಕಾರಿಗಳು ತಾಲೂಕು ಸಂಚಾಲಕರಾಗಿ ಗೋಪಾಲಕೃಷ್ಣ, ಆಂತರಿಕ ಶಿಸ್ತು ಮತ್ತು ತರಬೇತಿಯ ಸಂಚಾಲಕರಾಗಿ ಸೋಮೇಶ್, ಹಿಂದುಳಿದ ಅಲ್ಪಸಂಖ್ಯಾತ ವಿಭಾಗದ ಸಂಚಾಲಕರಾಗಿ ಮಲ್ಲಿಕಾರ್ಜುನ, ಸಾಂಸ್ಕೃತಿಕ ಸಂಘಟನಾ ಸಂಚಾಲಕರಾಗಿ ಚೆನ್ನಯ್ಯ, ಖಜಾಂಚಿಯಾಗಿ ಗೋಪಾಲ್, ಪಟ್ಟಣ ಪಂಚಾಯತಿ ಶಾಖೆಯ ಟೌನ್ ಸಂಚಾಲಕರಾಗಿ ಕಾರಯ್ಯ, ಆಂತರಿಕ ಶಿಸ್ತು ಮತ್ತು ತರಬೇತಿ ಸಂಚಾಲಕರಾಗಿ ವಿಜಯ್ ಕುಮಾರ್, ಹಿಂದುಳಿದ ವಿಭಾಗ ಪೌರಕಾರ್ಮಿಕ ಸಂಚಾಲಕರಾಗಿ ಶಿವಮೂರ್ತಿ, ಅಸಂಘಟಿತ ಮತ್ತು ಪೌರಕಾರ್ಮಿಕ ವಿಭಾಗ ಸಂಚಾಲಕರಾಗಿ ಆನಂದ್, ಖಜಾಂಚಿಯಾಗಿ ಪ್ರವೀಣ್, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸುಂದರವರು ನೇಮಕಗೊಂಡರು. ತಾಲೂಕು ಆಂತರಿಕ ಶಿಸ್ತು ಮತ್ತು ತರಬೇತಿ ಸಂಚಾಲಕ ಸೋಮೇಶ್ ಮಾತನಾಡಿ, ದಲಿತ ಸಂಘರ್ಷ ಸಮಿತಿಯು ಸಮಾಜದ ನೊಂದವರ ಪರ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಬುದ್ಧ, ಬಸವಣ್ಣ ಅವರು ಮತ್ತು ಬಾಬಾ ಸಾಹೇಬರ ಆಶಯದಂತೆ ನಾವು ಕಾರ್ಯವನ್ನು ನಿರ್ವಹಿಸೋಣ. ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸವನ್ನು ಮಾಡೋಣ ಬಾಬಾ ಸಾಹೇಬರ ಕನಸನ್ನ ನನಸು ಮಾಡೋಣ ಎಂಬುದರು. ಜಿಲ್ಲಾ ಸಂಚಾಲಕ ಸರಗೂರು ಸಣ್ಣಸ್ವಾಮಿ, ಉಯ್ಯಂಬಳ್ಳಿ ಮಲ್ಲಿಕಾರ್ಜುನ್ ಸಂಘಟನೆ ಬಲವರ್ಧನ ಬಗ್ಗೆ ಮಾತನಾಡಿದರು.

ವಿದ್ಯಾರ್ಥಿ ನಿಲಯಗಳೆಡೆಗೆ ವಚನಗಳ ನಡಿಗೆ

# ಶರಣ ತತ್ವಗಳು ಜೀವನಕ್ಕೆ ದಾರಿದೀಪ: ಡಾ. ಸೋಮಪ್ರಭಾ

ಚಾಮರಾಜನಗರ, ಶರಣರ ತತ್ವಗಳು ಜೀವನಕ್ಕೆ ದಾರಿದೀಪ ಎಂದು ಮುದ್ದುವೀರಪ್ಪ ಸ್ಮಾರಕ ಆಸ್ಪತ್ರೆಯ ವೈದ್ಯರಾದ ಡಾ. ಸೋಮಪ್ರಭಾ ಹೇಳಿದರು. ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಮಂಗಳಮ್ಮ ಮತ್ತು ಡಾ. ಶಿವರುದ್ರಸ್ವಾಮಿ ಅವರ ದತ್ತಿಯ ಅಂಗವಾಗಿ ಕೊಳ್ಳೇಗಾಲ ತಾಲ್ಲೂಕು ಮುಡಿಗುಂಡದ ರಾವ್ ಬಹದ್ದೂರ್ ಗುಬ್ಬಿ ತೋಟದಪ್ಪ ವಿದ್ಯಾರ್ಥಿನಿ ನಿಲಯದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ನಿಲಯಗಳೆಡೆಗೆ ವಚನಗಳ ನಡಿಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು

ಶರಣರ ಕಾಯಕ ಮತ್ತು ದಾಸೋಹ ತತ್ವಗಳು ಪ್ರತಿಯೊಬ್ಬರ ಜೀವನವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಜೀವನಮೌಲ್ಯಗಳಾಗಿವೆ. ವಿದ್ಯಾರ್ಥಿಗಳು ಈ ತತ್ವಗಳನ್ನು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡರೆ ಉತ್ತಮ ವ್ಯಕ್ತಿತ್ವ, ಶಿಸ್ತು, ಸೇವಾ ಮನೋಭಾವ ಹಾಗೂ ಸಾಮಾಜಿಕ ಹೊಣೆಗಾರಿಕೆ ಬೆಳೆಯುತ್ತದೆ. ಇಂದಿನ ತಂತ್ರಜ್ಞಾನದ ಯುಗದಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ಜ್ಞಾನಾರ್ಜನೆ,



ಸಂಶೋಧನೆ ಮತ್ತು ವ್ಯಕ್ತಿತ್ವ ವಿಕಸನಕ್ಕಾಗಿ ಸದುಪಯೋಗಪಡಿಸಿಕೊಳ್ಳಬೇಕು. ಮೊಬೈಲ್, ಸಾಮಾಜಿಕ ಜಾಲತಾಣಗಳು ಹಾಗೂ ಇತರ ತಂತ್ರಜ್ಞಾನ ಸಾಧನಗಳನ್ನು ದುರುಪಯೋಗಪಡಿಸಿಕೊಂಡರೆ ಅದು ಜೀವನಕ್ಕೆ ಮಾರಕವಾಗಬಹುದು. ಆದ್ದರಿಂದ ತಂತ್ರಜ್ಞಾನ ನಮ್ಮ ಬದುಕಿಗೆ ಪೂರಕವಾಗಿರಬೇಕು, ಹೊರತು ಜೀವನವನ್ನು ಹಾಳು ಮಾಡುವ ಸಾಧನವಾಗಬಾರದು ಎಂದು ಕಿವಿಮಾತು ಹೇಳಿದರು.

ಚಾಮರಾಜನಗರ ಜಿಲ್ಲಾ ಶರಣು ವಿಶ್ವವಚನ ಫೌಂಡೇಷನ್ ಅಧ್ಯಕ್ಷ ಜಿ ವೀರಭದ್ರಸ್ವಾಮಿ ಮಾತನಾಡಿ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ, ಮಾನವೀಯ ಮೌಲ್ಯಗಳು ಮತ್ತು ಶರಣರ ವಚನಗಳಲ್ಲಿ ಅಡಗಿರುವ ಜೀವನದರ್ಶನವನ್ನು ಅಳವಡಿಸಿಕೊಂಡು ಸಮಾಜಕ್ಕೆ ಆದರ್ಶ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ ಅವರು ಹನ್ನೆರಡನೆಯ ಶತಮಾನದಲ್ಲಿಯೇ ವೈದ್ಯ ಸಂಗಣ್ಣ ಎಂಬ ವಚನಕಾರರು ವೈದ್ಯಸೇವೆಯ ಜೊತೆಗೆ ಆಧ್ಯಾತ್ಮಿಕ ಬದುಕಿನ ಮಹತ್ವವನ್ನು ಸಾರಿದ್ದರು. ಚಿಕಿತ್ಸೆ ಪಡೆಯುವುದು ಅಗತ್ಯವಾದರೂ, ಅದರೊಂದಿಗೆ ದೇವರ ಭಕ್ತಿ, ಸತ್ಚಿಂತನೆ ಮತ್ತು ಆತ್ಮವಿಶ್ವಾಸವೂ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂಬ ಸಂದೇಶವನ್ನು ವೈದ್ಯ ಸಂಗಣ್ಣ ತಮ್ಮ ವಚನಗಳ ಮೂಲಕ ನೀಡಿದ್ದಾರೆ. ಇಂದಿನ ಸಮಾಜದಲ್ಲಿ ವೈದ್ಯಕೀಯ ಚಿಕಿತ್ಸೆಯೊಂದಿಗೆ ಉತ್ತಮ ಚಿಂತನೆ, ಭಕ್ತಿ ಮತ್ತು ಸಕಾರಾತ್ಮಕ ಮನೋಭಾವವನ್ನು ಬೆಳೆಸಿಕೊಂಡಾಗ ಜೀವನ ಮತ್ತಷ್ಟು ಸಾರ್ಥಕವಾಗುತ್ತದೆ ಎಂದರು.

ನಂತರ ವಚನ ವಾಚನ ಮಾಡಿದ 40 ವಿದ್ಯಾರ್ಥಿಗಳಿಗೆ ವಚನ ಪುಸ್ತಕ ಮತ್ತು ವಚನ ದೀವಿಗೆ ಪ್ರಮಾಣಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ಡಾ. ಲೋಕೇಶ್ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಕೊಳ್ಳೇಗಾಲ ತಾಲ್ಲೂಕು ಘಟಕ ಅಧ್ಯಕ್ಷೆ ಜಗದಾಂಬ, ಎನ್ರಿಚ್ ಮಹದೇವಸ್ವಾಮಿ, ಅಕ್ಕನ ಬಳಗದ ಅಧ್ಯಕ್ಷೆ ಸವಿತ ಲೋಕೇಶ್, ಕಾರ್ಯದರ್ಶಿ ಶ್ವೇತಾ ಸ್ವಾಮಿ, ಕೇಂದ್ರೀಯ ಸಂಚಾಲಕ ವಿ. ಲಿಂಗಣ್ಣ, ಉಪಾಧ್ಯಕ್ಷ ಶಿವಪುರ ಉಮಾಪತಿ, ಸುಮಾ ವೀರಭದ್ರಸ್ವಾಮಿ, ಸಾಂಬಶಿವಯ್ಯ, ವೇದಮೂರ್ತಿ ಹಾಗೂ ಎಂ. ಮಹದೇವಸ್ವಾಮಿ ಉಪಸ್ಥಿತರಿದ್ದರು.

# ಅಕ್ರಮ ಸಿಬಿಐಗೆ ವಹಿಸಿ

## ಪೊಲೀಸ್, ಕೆಪಿಎಸ್‌ಸಿ ನೇಮಕಾತಿ ವಿಚಾರ: ಮೋಹನ್ ವಿಶ್ವ



ಮೈಸೂರು: ಪೊಲೀಸ್ ನೇಮಕಾತಿ ಪರೀಕ್ಷೆಗಳು ಹಾಗೂ ಲೋಕಸೇವಾ ಆಯೋಗದ (ಕೆಪಿಎಸ್ಸಿ) ನೇಮಕಾತಿಯಲ್ಲಿ ನಡೆದಿರುವ ಅಕ್ರಮಗಳ ತನಿಖೆಯನ್ನು ಕೇಂದ್ರ ತನಿಖಾ ದಳಕ್ಕೆ (ಸಿಬಿಐ) ವಹಿಸಬೇಕು ಮತ್ತು ಗೃಹ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ರಾಜ್ಯ ಬಿಜೆಪಿ ವಕ್ತಾರ ಮೋಹನ್ ವಿಶ್ವ ಒತ್ತಾಯಿಸಿದರು. ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ಸಾಮಾನ್ಯ ಪೊಲೀಸ್ ಪೇದೆ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲಾಗದ ಸರ್ಕಾರವು ಯುವಕರ ಪ್ರತಿಭಟನೆ ಮತ್ತು ಲಾಠಿ ಪ್ರಹಾರದ ನಂತರವೂ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಸುದ್ದಿಗೋಷ್ಠಿಯಲ್ಲಿ ರಾಜ್ಯ ಮಾಧ್ಯಮ ಸಮಿತಿ ಸದಸ್ಯ ಬಿ.ನಾಗೇಶ್, ಜಿಲ್ಲಾ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಿಷಿತ್ ರಾಜೇ ಅರಸ್ ಹಾಗೂ ಜಿಲ್ಲಾ ಕಾರ್ಯದರ್ಶಿ ದಯಾನಂದ್ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಸಾಲು ಸಾಲು ನೇಮಕಾತಿ ಹಗರಣ

ರಾಜ್ಯದಲ್ಲಿ ಕೆಪಿಎಸ್ಸಿ ನೇಮಕಾತಿ ಹಗರಣ, ಪೊಲೀಸ್ ಪೇದೆ ಪರೀಕ್ಷಾ ಅಕ್ರಮ ಹಾಗೂ ಕೃಷಿ ಪದವೀಧರ ವಿದ್ಯಾರ್ಥಿಗಳ ನೇಮಕಾತಿ ವಿಚಾರಕ್ಕೆ ಸಂಬಂಧಿಸಿದಂತೆ ಯುವಜನತೆ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಲವು ನೇಮಕಾತಿ ಪರೀಕ್ಷೆಗಳ ಕುರಿತು ವಿದ್ಯಾರ್ಥಿಗಳು ಧರಣಿ ನಡೆಸುತ್ತಿದ್ದರೂ ಆಡಳಿತಾರೂಢ ಕಾಂಗ್ರೆಸ್‌ನ ಯಾವುದೇ ನಾಯಕರು ಸ್ಥಳಕ್ಕೆ ಭೇಟಿ ನೀಡಿ ಮನವಿ ಆಲಿಸುವ ಸೌಜನ್ಯ ತೋರಿಲ್ಲ. ರಾಷ್ಟ್ರಮಟ್ಟದ ಪರೀಕ್ಷೆಗಳಲ್ಲಿ ಸಮಸ್ಯೆಯಾದಾಗ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ್ದ ಆಡಳಿತ ಪಕ್ಷದ ನಾಯಕರು, ಈಗ ರಾಜ್ಯದಲ್ಲಿ ಸಾಲು ಸಾಲು ಪರೀಕ್ಷಾ ಅಕ್ರಮಗಳು ನಡೆಯುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳದೆ ಮೌನಕ್ಕೆ ಶರಣಾಗಿದ್ದಾರೆ ಎಂದು ಟೀಕಿಸಿದರು.

### ಕೋಟ್ಯಂತರ ರೂ. ಲಂಚದ ಆರೋಪ

ರಾಜ್ಯದಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿಯಿದ್ದಾಗ ಆಕಾಂಕ್ಷಿಗಳು ಭಾರಿ ಪ್ರತಿಭಟನೆ ನಡೆಸಿದ್ದರು. ಹೋರಾ ಟಕ್ಕೆ ಮಣಿದು 52 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಭರವಸೆ ನೀಡಿದ್ದ ಸರ್ಕಾರ, ಆ ನಂತರ ಸಾಲು ಸಾಲು ಅಕ್ರಮಗಳಿಗೆ ದಾರಿ ಮಾಡಿಕೊಟ್ಟಿದೆ. ಅಭ್ಯರ್ಥಿಗಳೇ ಸ್ವತಃ ರಹಸ್ಯ ಕಾರ್ಯಾಚರಣೆ ನಡೆಸಿ ಮಾಹಿತಿ ಹೊರಹಾಕಿದ್ದು, ಒಂದೊಂದು ಹುದ್ದೆಗೆ ಮಧ್ಯವರ್ತಿಗಳು 80 ಲಕ್ಷ ರೂಪಾಯಿಗಳವರೆಗೆ ಲಂಚದ ಬೇಡಿಕೆ ಇಟ್ಟಿದ್ದಾರೆ. ಈ ವೇಳೆ ಕೆಲವು ಪ್ರಭಾವಿ ನಾಯಕರು ಹಾಗೂ ಅಧಿಕಾರಿಗಳ ಹೆಸರುಗಳು ಕೇಳಿಬಂದಿವೆ ಎಂದು ಆರೋಪಿಸಿದರು.

### ಸಿಬಿಐ ತನಿಖೆಗೆ ಪಟ್ಟು

ಬಿಜೆಪಿ ಪಕ್ಷವು ತೀವ್ರ ರಾಜಕೀಯ ಒತ್ತಡ ತಂದ ನಂತರ ಸರ್ಕಾರವು ಆಂತರಿಕವಾಗಿ ರಾಜ್ಯ ತನಿಖಾ ಸಂಸ್ಥೆಗೆ (ಸಿಐಡಿ) ವಹಿಸುವುದಾಗಿ ಹೇಳಿದೆ. ಆದರೆ ಹಿಂದೆ ಇಂತಹ ಸಂಸ್ಥೆಗಳು ಹಾಗೂ ವಿಶೇಷ ತನಿಖಾ ತಂಡಗಳ ಮೂಲಕ ಸರ್ಕಾರವೇ ತನಗೆ ಬೇಕಾದವರಿಗೆ ದೋಷಮುಕ್ತ ಪ್ರಮಾಣಪತ್ರ ನೀಡಿರುವ ಉದಾಹರಣೆಗಳಿವೆ. ಆದ್ದರಿಂದ ಯುವಜನತೆಯ ಭವಿಷ್ಯದ ಹಿತದೃಷ್ಟಿಯಿಂದ ಈ ಎಲ್ಲಾ ನೇಮಕಾತಿ ಹಗರಣಗಳನ್ನು ನಿಷ್ಪಕ್ಷಪಾತ ತನಿಖೆಗಾಗಿ ತಕ್ಷಣವೇ ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು.

# ಖಾಲಿ ಕೊಡ ಪ್ರದರ್ಶನ

## ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ ಪ್ರತಿಭಟನೆ




ಹೆಚ್.ಡಿ.ಕೋಟೆ: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಮುಂದಿನ ಹದಿನೈದು ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುವಂತೆ ನೀಡಿರುವ ಆದೇಶವನ್ನು ಖಂಡಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ವತಿಯಿಂದ ಖಾಲಿ ಕೊಡಗಳನ್ನು ಹಿಡಿದು ಭಾರಿ ಪ್ರತಿಭಟನೆ ನಡೆಸಲಾಯಿತು. ತಾಲೂಕು ಕಚೇರಿಯ ಮುಂಭಾಗದಲ್ಲಿ ಕರವೇ ತಾಲೂಕು ಅಧ್ಯಕ್ಷ ಕ್ರಾಂತಿಕುಮಾರ್ ಅವರ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು ಹಾಗೂ ಬೆಂಬಲಿಗರು, ಪ್ರಾಧಿಕಾರ ಮತ್ತು ಸರ್ಕಾರದ ನಿರ್ಧಾರದ ವಿರುದ್ಧ ಉಗ್ರ ಘೋಷಣೆಗಳನ್ನು ಕೂಗಿ ತಮ್ಮ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು.

### ಅವೈಜ್ಞಾನಿಕ ಆದೇಶ ಹಾಗೂ ಶಾಸನಾತ್ಮಕ ಹೋರಾಟಕ್ಕೆ ಒತ್ತಾಯ

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಅಧ್ಯಕ್ಷ ಕ್ರಾಂತಿಕುಮಾರ್, ಈ ಬಾರಿ ಕಾವೇರಿ ಜಲಾನಯನ ಪ್ರದೇಶದಲ್ಲಿ ತೀವ್ರ ಮಳೆ ಕೊರತೆಯಾಗಿದ್ದು ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಗಣನೀಯವಾಗಿ ಕುಸಿದಿದೆ. ರಾಜ್ಯದ ಜನರ ಕುಡಿಯುವ ನೀರಿನ ಅಗತ್ಯವನ್ನೇ ಪೂರೈಸಲು ಸಾಕಷ್ಟು ನೀರಿಲ್ಲದ ಇಂತಹ ಕಷ್ಟಕರ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸುವಂತೆ ಆದೇಶ ನೀಡಿರುವುದು ಸಂಪೂರ್ಣವಾಗಿ ಅವೈಜ್ಞಾನಿಕ ಹಾಗೂ ವಾಸ್ತವ ಸ್ಥಿತಿಯನ್ನು ನಿರ್ಲಕ್ಷಿಸಿರುವ ನಿರ್ಧಾರವಾಗಿದೆ ಎಂದು ಆರೋಪಿಸಿದರು. ಸರ್ಕಾರ ಯಾವುದೇ ಕಾರಣಕ್ಕೂ ನೀರನ್ನು ಬಿಡುಗಡೆ ಮಾಡಬಾರದು, ತಕ್ಷಣವೇ ಈ ಆದೇಶವನ್ನು ಉನ್ನತ ನ್ಯಾಯಾಲಯದಲ್ಲಿ ಪ್ರಶ್ನಿಸಿ ರಾಜ್ಯದ ಹಕ್ಕನ್ನು ರಕ್ಷಿಸಬೇಕು. ಒಂದು ವೇಳೆ ನೀರು ಬಿಡುಗಡೆ ಮಾಡಿದರೆ ಕಾವೇರಿ ಕೊಳ್ಳದಾದ್ಯಂತ ಭಾರಿ ಜನಾಕ್ರೋಶ ವ್ಯಕ್ತವಾಗಲಿದ್ದು, ಅದಕ್ಕೆ ಸರ್ಕಾರವೇ ನೇರ ಹೊಣೆಯಾಗಲಿದೆ ಎಂದು ಎಚ್ಚರಿಸಿದರು.

### ಸ್ಥಳೀಯ ಜಲಾಶಯ, ಕೆರೆಗಳಿಗೆ ನೀರು ತುಂಬಿಸಲು ಆಗ್ರಹ

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಜೀವಿಕ ಬಸವರಾಜು ಮಾತನಾಡಿ, ಕಾವೇರಿ ಮತ್ತು ಕಪಿಲಾ ನದಿಗಳು ನಮ್ಮ ರಾಜ್ಯದ ಜೀವನಾಡಿಗಳಾಗಿದ್ದು, ಮೊದಲು ನಮ್ಮ ನಾಡಿನ ರೈತರ ಹಾಗೂ ಜನರ ಹಿತಾಸಕ್ತಿಯನ್ನು ಕಾಯುವುದು ಸರ್ಕಾರದ ಪ್ರಥಮ ಕರ್ತವ್ಯವಾಗಿದೆ. ಕಾವೇರಿ ನೀರು ನಿಯಂತ್ರಣ ಸಮಿತಿಯು ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸದೆ ನೀಡಿದ ತೀರ್ಪಿನಿಂದ ಈ ಭಾಗದ ಜನರು ಆತಂಕಕ್ಕೆ ಒಳಗಾಗಿದ್ದಾರೆ. ತಾಲೂಕಿನಲ್ಲಿಯೂ ಬರ ಪರಿಸ್ಥಿತಿ ತಲೆದೋರಿರುವುದರಿಂದ ಜನ ಮತ್ತು ಜಾನುವಾರುಗಳ ಕುಡಿಯುವ ನೀರಿನ ಅನುಕೂಲಕ್ಕಾಗಿ ಮೊದಲು ತಾರಕ ಹಾಗೂ ಹೆಬ್ಬಾಳ ಜಲಾಶಯಗಳಿಗೆ ಮತ್ತು ಸುತ್ತಮುತ್ತಲಿನ ಕೆರೆಗಳಿಗೆ ನೀರು ತುಂಬಿಸಬೇಕು. ಅದಾದ ನಂತರ ಉಳಿಯುವ ಹೆಚ್ಚುವರಿ ನೀರನ್ನು ಮಾತ್ರ ಹೊರ ರಾಜ್ಯಕ್ಕೆ ಹರಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

### ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಕೆ

ಆದೇಶವನ್ನು ಹಿಂಪಡೆಯುವವರೆಗೆ ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಹೋರಾಟವನ್ನು ಮುಂದುವರಿಸುವುದಾಗಿ ಎಚ್ಚರಿಸಿದ ಪ್ರತಿಭಟನಾಕಾರರು, ಬಳಿಕ ಸ್ಥಳೀಯ ತಹಶೀಲ್ದಾರ್ ಅವರ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಈ ಪ್ರತಿಭಟನಾ ಸಭೆಯಲ್ಲಿ ಸಂಘಟನೆಯ ಗೌರವಾಧ್ಯಕ್ಷ ಸೋಮಣ್ಣ, ನಗರ ಅಧ್ಯಕ್ಷ ಮಹೇಶ್, ಕಾರ್ಮಿಕ ಘಟಕದ ಅಧ್ಯಕ್ಷ ಸೋಮಣ್ಣ, ಉಪಾಧ್ಯಕ್ಷ ಚೆಲುವರಾಜು, ಪ್ರಮುಖರಾದ ಹೆಗ್ಗಡಾಪುರ ನಾಗರಾಜು, ನಾಗನಹಳ್ಳಿ ದಿನೇಶ್, ರಾಜೇಶ್, ಕೃಷ್ಣ, ಜಲೀಲ್ ಪಾಷಾ, ಚೆನ್ನ, ಗೋಪಾಲ್ ಶೆಟ್ಟಿ, ತಿಮ್ಮನಾಯ್ಕ, ಅಭಿಷೇಕ್, ಶಿವು, ಪ್ರಜ್ವಲ್, ನಟರಾಜು, ಸೋಮು, ಮೂರ್ತಿ, ಮಂಜು, ರವಿ ಹಾಗೂ ಮಹೇಶ್ ಸೇರಿದಂತೆ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.

# ಶಕ್ತಿ ದೇವತೆಗಳಿಗೆ ಶಾಸಕ ಇಕ್ಬಾಲ್ ಹುಸೇನ್‌ರಿಂದ ಮಡಲಕ್ಕಿ ಸಮರ್ಪಣೆ

ರಾಮನಗರ: ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಮಹೋತ್ಸವದ ವೇಳೆ ಹಲವಾರು ವರ್ಷಗಳಿಂದ ರೂಢಿಸಿಕೊಂಡು ಬಂದಿರುವ ಪದ್ಧತಿಯಂತೆ ಶಾಸಕ ಇಕ್ಬಾಲ್ ಹುಸೇನ್ ನಗರದ 16 ಶಕ್ತಿ ದೇವತೆಗಳಿಗೆ ಮಡಲಕ್ಕಿಯನ್ನು ಅರ್ಪಿಸಿದರು.

ಈ ವೇಳೆ ಮಾತನಾಡಿದ ಅವರು, ಕ್ಷೇತ್ರದ ಜನರು ಸುಭೀಕ್ಷವಾಗಿರಲಿ, ಮಳೆ ಬೆಳೆ ಯಾಗಲಿ ಎಂದು ಸಂಕಲ್ಪ ಮಾಡಿ ನಗರದ 16 ದೇವತೆಗಳಿಗೆ ಮಡಿಲಕ್ಕಿ ಸೇವೆ ಅರ್ಪಿಸಿದ್ದೇನೆ ಎಂದರು. ಹಿಂದೂ ಸಂಪ್ರದಾಯದಲ್ಲಿ ಆಷಾಢ, ಶ್ರಾವಣ ಹಾಗೂ ನವರಾತ್ರಿಯ ಸಮಯದಲ್ಲಿ ದೇವತೆಗಳಿಗೆ ಮಡಿಲಕ್ಕಿ ಕೊಡುವುದು ವಾಡಿಕೆ. ಹಾಗಾಗಿ ಕಳೆದ ಏಳು ವರ್ಷಗಳಿಂದ ನಾನು ಸತತವಾಗಿ ನಗರದ ಶ್ರೀ ಚಾಮುಂಡೇಶ್ವರಿ ಕರಗ ನಡೆಯುವ ಸಮ ಯದಲ್ಲಿ ನಗರದ ಎಲ್ಲ ದೇವತೆಗಳಿಗೆ ಮಡಿಲಕ್ಕಿ ಸೇವೆ ಮಾಡುತ್ತಾ ಬಂದಿದ್ದೇನೆ. ತಾಯಿ ಚಾಮುಂಡೇಶ್ವರಿ ಈ ಕ್ಷೇತ್ರದ ಜನರ ಕಷ್ಟ ಸುಖಗಳನ್ನು ಕೇಳಲು ನನಗೆ ಜವಾಬ್ದಾರಿ ನೀಡಿ ಆಶೀರ್ವಾದ ಸಹ ಮಾಡಿದ್ದು, ಆ ತಾಯಿಯ ಹಬ್ಬವನ್ನು ಶ್ರದ್ಧಾ-ಭಕ್ತಿಯಿಂದ ಆಚರಣೆ ಮಾಡುತ್ತಿದ್ದೇನೆ ಎಂದರು. ಹಿಂದಿನಿಂದಲೂ ಈ ತಾಯಿಯನ್ನು ನಂಬಿ ಪೂಜಿಸಿದವರನ್ನು ರಕ್ಷಣೆ ಮಾಡುತ್ತಾ ಪಟ್ಟಣದಲ್ಲಿ ಶಾಂತಿ, ಸೌಹಾರ್ದತೆ ನೆಲೆಸುವಂತೆ ನೋಡಿ ಕೊಂಡಿದ್ದಾಳೆ ಎಂದು

**16 ದೇವಾಲಯಗಳಿಗೆ ಮಡಿಲಕ್ಕಿ ಸಮರ್ಪಣೆ:**

ಶಕ್ತಿದೇವತೆ ಚಾಮುಂಡೇಶ್ವರಿ ಅಮ್ಮನವರ ದೇವಾಲಯಕ್ಕೆ ಶಾಸಕರು ಸಾಂಕೇತಿಕವಾಗಿ ಮಡಿಲಕ್ಕಿ ಸಮರ್ಪಣೆ ಮಾಡಿದರು. ಆನಂತರ ಚಾಮುಂಡೇಶ್ವರಿ ಕಲ್ಯಾಣ ಮಂಟಪದಲ್ಲಿ ಕೊಂಕಾಣಿದೊಡ್ಡಿ ಆದಿಶಕ್ತಿ, ದ್ಯಾವರಸೇಗೌಡನದೊಡ್ಡಿ ಶ್ರೀ ಚಾಮುಂಡೇಶ್ವರಿ ದೇವತೆ, ಗಾಂಧಿನಗರ ಆದಿಶಕ್ತಿ, ಶೆಟ್ಟಿಹಳ್ಳಿ ಬೀದಿ ಆದಿಶಕ್ತಿ, ಶ್ರೀ ಬನ್ನಿಮಹಂಕಾಳಿ ಅಮ್ಮ, ತೋಪ್ ಖಾನ್ ಮೊಹಲ್ಲಾದ ಮುತ್ತು ಮಾರಮ್ಮ, ಬಾಲಗೇರಿ ಬಿಸಿಲು ಮಾರಮ್ಮ, ಮಗ್ಗದಕೇರಿ ಮಾರಮ್ಮ, ಬಂಡಾರಮ್ಮ, ಟೂಪ್ಲೇನ್ ಬಂಡಿ ಮಹಂಕಾಳಮ್ಮ, ಐಜೂರು ಆದಿಶಕ್ತಿಪುರದ ಆದಿಶಕ್ತಿ, ಮಂಜುನಾಥನಗರ ಶ್ರೀ ಹುಲಿಯೂರಮ್ಮ ದೇವಿ, ಕೆಂಪೇಗೌಡನದೊಡ್ಡಿ ಶ್ರೀ ಚಾಮುಂಡೇಶ್ವರಿ ದೇವಿ, ಶ್ರೀ ಕೊಲ್ಲಾಪುರದಮ್ಮ ದೇವಿ, ಕಾಯಿಸೊಪ್ಪಿನ ಬೀದಿ ಶ್ರೀ ಮಾಸ್ತಮ್ಮ ಅಮ್ಮನವರ ದೇವಾಲಯಗಳಿಗೆ ಹರಿಸಿನ ಕುಂಕುಮ, ಸೀರೆ, ಬಳೆ, ವೀಳ್ಯದೆಲೆ, ಅಡಿಕೆ ಹೊಂಬಾಳೆ, ಮಡಿಲಕ್ಕಿ ಪದಾರ್ಥ, ಬಿಚ್ಚಾಲೆ, ಪಂಚ ಫಲಗಳನ್ನು ಒಳಗೊಂಡ ಪೂಜಾ ಸಾಮಗ್ರಿಗಳನ್ನು ಬುಟ್ಟಿಯಲ್ಲಿರಿಸಿ ದೇವತೆಗಳಿಗೆ ಅರ್ಪಿಸಿ ಕಾಣಿಕೆ ಯನ್ನು ನೀಡುವ ಮೂಲಕ ಶಾಸಕರು ಮಡಿಲಕ್ಕಿ ಸಮರ್ಪಣೆ ಮಾಡಿದರು ಈ ವೇಳೆ ಮಾಜಿ ಶಾಸಕ ಕೆ. ರಾಜು, ಜಿಪಂ ಮಾಜಿ ಅಧ್ಯಕ್ಷ ಕೆ. ರಾಜು, ತಾಪಂ ಮಾಜಿ ಅಧ್ಯಕ್ಷ ಪ್ರಾಣೇಶ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಸಿಎನ್ ಆರ್ ವೆಂಕಟೇಶ್, ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟ ಅಧ್ಯಕ್ಷ ರೈಡ್ ನಾಗರಾಜ್, ಗ್ರಾಪಂ ಮಾಜಿ ಅಧ್ಯಕ್ಷ ಪ್ರಭು, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯೆ ಆಯಿಷಾ ಬಾನು, ಮುಖಂಡರಾದ ಮಂಚೇಗೌಡ ಹಾಜರಿದ್ದರು.



# ಹೆದ್ದಾರಿ ರಸ್ತೆಗಳ ಅಭಿವೃದ್ಧಿಗೆ ಒತ್ತು



ಚಾಮರಾಜನಗರ, ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿಗಳು ಅಭಿವೃದ್ಧಿ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ತಿಳಿಸಿದರು.

ತಾಲೂಕಿನ ಕೆಬ್ಬೇಪುರ ಗ್ರಾಮದಲ್ಲಿ 2.50 ಕೋಟಿ ರೂ. ವೆಚ್ಚದಲ್ಲಿ ಬದನವಾಳುವಿಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ 301ರ ರಸ್ತೆ ಅಭಿವೃದ್ಧಿಗಾಗಿ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ರೂ.ಗಳ ಅನುದಾನವನ್ನು ಜಾರಿ ಮಾಡಿ, ಕಾಮಗಾರಿ ಪ್ರಗತಿಯಲ್ಲಿದೆ. ಪಂಚ ಗ್ಯಾರಂಟಿ ಯೋಜನೆಗಳ ನಡುವೆಯೂ ಕ್ಷೇತ್ರದ ಅಭಿವೃದ್ಧಿಗೆ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯಅವರು ಹಾಗೂ ಯುವಕರ ಕಣ್ಮಣ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಅನುದಾನ ನೀಡಿದ್ದಾರೆ. ನಮ್ಮ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆಬ್ಬೇಪುರ, ಚಿಕ್ಕಬೇಗೂರು, ಹಿರಿಬೇಗೂರು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒತ್ತು ನೀಡಿದ್ದೇನೆ. ಕಾಮಗಾರಿಯ ಕ್ರಿಯೇ ಯೋಜನೆಯಂತೆ ಕೆಬ್ಬೇಪುರ ಮಾರ್ಗದಲ್ಲಿ ಸೇತುವೆ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿಗೆ ಲೋಪಯೋಗಿ ಇಲಾಖೆಗೆ ವಹಿಸಲಾಗಿದೆ.

ರಾಜ್ಯ ಹೆದ್ದಾರಿ ಯೋಜನೆಯಡಿಯಲ್ಲಿ 2.50 ಕೋಟಿ ರೂ. ಸೇತುವೇ ನಿರ್ಮಾಣ ಸೇರಿದಂತೆ 9.10 ಕಿ.ಮೀ> ಉದ್ದ ರಸ್ತೆಯ ಅಭಿವೃದ್ಧಿಮಾಡಲಾಗುವುದು ಎಂದರು. ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ತಾ.ಪಂ. ಮಾಜಿ ಅಧ್ಯಕ್ಷ ಎಂ.ಬಿ. ರೇವಣ್ಣ, ಮುಖಂಡರಾದ ಕೆಬ್ಬೇಪುರ ಮಧುಸೂಧನ್, ಗ್ರಾ.ಪಂ. ಮಾಜಿ ಅಧ್ಯಕ್ಷ ಕುಲಗಾಣ ಮಧುಕುಮಾರ್, ಕೆಬ್ಬೇಪುರ ಹರೀಶ್, ಸಿ.ಎಂ. ಮಂಜುನಾಥ್, ಕೆಂಪರಾಜು ಹೆಗ್ಗವಾಡಿ, ಕೆರೆಹಳ್ಳಿ ರೇವಣ್ಣ, ಚಿಕ್ಕಬೇಗೂರು ನಾಗೇಂದ್ರ, ಕೆಬ್ಬೇಪುರ ನಾಗೇಶ್, ಗೌಡಿಕೆ ಮಾದಪ್ಪ, ಪಿಡಬ್ಲ್ಯೂಡಿ ಎಇಇ ಶಾಂತಮ್ಮ ಮೊದಲಾದವರು ಹಾಜರಿದ್ದರು.

# ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯ




ಗುಂಡ್ಲುಪೇಟೆ:- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿಯ ಯಡವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮವನ್ನು ಆಯೋಜಿಸಿ, ವಿದ್ಯಾರ್ಥಿಗಳಿಗೆ ದುಶ್ಚಟಗಳಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಆರೋಗ್ಯ ಇಲಾಖೆಯ ಅಧಿಕಾರಿ ಭವ್ಯ ಅವರು, ಧೂಮಪಾನ, ಮದ್ಯಪಾನ, ಮಾದಕ ವಸ್ತುಗಳ ಸೇವನೆ ಸೇರಿದಂತೆ ವಿವಿಧ ದುಶ್ಚಟಗಳು ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಬೀರುವ ಗಂಭೀರ ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ಆರೋಗ್ಯಕರ ಆಹಾರ ಪದ್ಧತಿ, ನಿಯಮಿತ ವ್ಯಾಯಾಮ ಹಾಗೂ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಶಾಲೆಯ ಮುಖ್ಯೋಪಾಧ್ಯಾಯ ರಾಜೇಶ್ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯುವಜನರಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವ ಹಾಗೂ ಆರೋಗ್ಯ ಜಾಗೃತಿ ಮೂಡಿಸುವ ಕಾರ್ಯವನ್ನು ಪರಿಣಾಮಕಾರಿಯಾಗಿ ನಡೆಸುತ್ತಿದೆ. ಇಂತಹ ಕಾರ್ಯಕ್ರಮಗಳನ್ನು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಆಯೋಜಿಸಿದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಯೋಜನೆಯ ಮೇಲ್ವಿಚಾರಕ ವಿಜಯ್ ಕುಮಾರ್ ಅವರು ಗ್ರಾಮಾಭಿವೃದ್ಧಿ ಯೋಜನೆಯ ವಿವಿಧ ಸಾಮಾಜಿಕ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ರಾಜೇಶ್, ಆರೋಗ್ಯ ಇಲಾಖೆಯ ಅಧಿಕಾರಿ ಭವ್ಯ, ಸೇವಾ ಪ್ರತಿನಿಧಿ ವಿಶಾಲಾಕ್ಷಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

# ಸಿ.ಪುಟ್ಟರಂಗಶೆಟ್ಟಿಗೆ ಅದ್ದೂರಿ ಸ್ವಾಗತ



ಚಾಮರಾಜನಗರ, ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಜಿಲ್ಲಾ ಕೇಂದ್ರಕ್ಕೆ ಆಗಮಿಸಿದ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರು ಸಚಿವ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸ್ವಾಗತಿಸಿದರು. ಕಾರ್ಯಕರ್ತರು ಹಾರ ಹಾಕಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ನಗರಸಭಾ ಮಾಜಿ ಸದಸ್ಯ ಆರ್. ಎಂ. ರಾಜಪ್ಪ, ಬಸವರಾಜು, ಎಂ. ಶಿವಮೂರ್ತಿ, ಎಲ್.ಪ್ರಸನ್ನ,

ಮುಖಂಡರಾದ ಹೆಚ್.ಹೆಚ್.ನಾಗರಾಜು, ರಮೇಶ್ ಕುಮಾರ್ ನಾಯಕ, ಪಾಂಚಾಗಿ, ಶೇಖರಪ್ಪ, ಪುಟ್ಟಸ್ವಾಮಿ, ನವೀನ್, ಶಿವಕುಮಾರ್, ರಾಮಸಮುದ್ರ ನಾಗರಾಜು, ಅಕ್ಷಯ್ ಕುಮಾರ್, ಚೆನ್ನಪ್ಪ ಇತರರು ಹಾಜರಿದ್ದರು.

# ಉಪ್ಪಾರ ಸಮುದಾಯದಿಂದ ಸಂಭ್ರಮ




ಚಾಮರಾಜನಗರ, ನೂತನ ಸಚಿವರಾಗಿ ಸಿ.ಪುಟ್ಟರಂಗಶೆಟ್ಟಿ ಅವರು ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಉಪ್ಪಾರ ಸಮುದಾಯ ಸಂಭ್ರಮಾಚರಣೆ ಮಾಡಿತು..

ನಗರದ ಸಂತೇಮರಹಳ್ಳಿ ವೃತ್ತದಲ್ಲಿ ಬೆಂಗಳೂರಿನ ರಾಜಭವನದಲ್ಲಿ ನೂತನ ಸಚಿವರಾಗಿ ಸಿ.ಪುಟ್ಟರಂಗಶೆಟ್ಟರು ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆ ಉಪ್ಪಾರ ಸಮುದಾಯದ ಯಜಮಾನರು, ಮುಖಂಡರು, ಯುವಕರು ನೂತನ ಸಚಿವರಾದ ಸಿ.ಪುಟ್ಟರಂಗಶೆಟ್ಟರ ಭಾವಚಿತ್ರ ಹಿಡಿದು, ಪಟಾಕಿ ಸಿಡಿಸಿ, ಸಿಹಿ ಸಂಭ್ರಮಿಸಿದರು.

ಕಾಂಗ್ರೆಸ್ ಪಕ್ಷವು ಉಪ್ಪಾರ ಸಮುದಾಯ ಏಕೈಕ ಸಚಿವರಾಗಿ ಸಿ.ಪುಟ್ಟರಂಗಶೆಟ್ಟಿ ಅವರನ್ನು ಮಾಡಿರುವುದು ತುಂಬಾ ಖುಷಿ ತಂದಿದ್ದು ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ವರಿಷ್ಠರಿಗೆ ಉಪ್ಪಾರ ಸಮುದಾಯ ವತಿಯಿಂದ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು. ಈ ಸಂದರ್ಭದಲ್ಲಿ ಯಜಮಾನರಾದ ನಾಗಶೆಟ್ಟಿ, ಮಸಣಶೆಟ್ಟಿ, ಪೈಲ್ವಾನ್ ನಂಜಪ್ಪ, ಚನ್ನಿಗಶೆಟ್ಟಿ, ಯುವಕರಾದ ನಟರಾಜು,ಮಹೇಶ್, ಮಂಜು ಹಾಜರಿದ್ದರು.

ಮೂಲಭೂತ ಸೌಲಭ್ಯಗಳ ಪರಿಶೀಲನೆ

# ರಾಮಾಪುರ ಹೋಬಳಿ ಗ್ರಾಮಗಳಲ್ಲಿ ಜಿಲ್ಲಾಡಳಿತದ ಪರಿಶೀಲನೆ



ಹನೂರು: ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಖುದ್ದಾಗಿ ಅರಿತು ತ್ವರಿತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೇತೃತ್ವದ ಅಧಿಕಾರಿಗಳ ತಂಡವು ಹನೂರು ತಾಲೂಕಿನ ರಾಮಾಪುರ ಹೋಬಳಿಯ ನಾಲ್ಕು ಗ್ರಾಮಗಳಿಗೆ ಮಂಗಳವಾರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿತು.

**ನಾಲ್ಕು ಗ್ರಾಮಗಳಿಗೆ ಭೇಟಿ**

ರಾಮಾಪುರ ಹೋಬಳಿಯ ನಾಗಣ್ಣನಗರ, ಪುದ್ದು ರಾಮಾಪುರ, ಪಳನಿಮೇಡು ಮತ್ತು ಮಾಮರದೊಡ್ಡಿ ಗ್ರಾಮಗಳಿಗೆ ಭೇಟಿ ನೀಡಿದ ಅಧಿಕಾರಿಗಳ ತಂಡವು ಕುಡಿಯುವ ನೀರಿನ ಪೂರೈಕೆ, ರಸ್ತೆ ಸಂಪರ್ಕ, ಬೀದಿ ದೀಪ, ಪ್ರಾಥಮಿಕ ಆರೋಗ್ಯ ಕೇಂದ್ರ, ಶಾಲೆಗಳ ಸ್ಥಿತಿಗತಿ ಹಾಗೂ ಮೇವು ಲಭ್ಯತೆಯ ಬಗ್ಗೆ ಪರಿಶೀಲನೆ ನಡೆಸಿತು. ಗ್ರಾಮ ಪಂಚಾಯತ್ ವತಿಯಿಂದ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟವನ್ನೂ ಪರಿಶೀಲಿಸಲಾಯಿತು.

**ಯುವ ಸಂಘ ಮತ್ತು ಸಾರ್ವಜನಿಕರೊಂದಿಗೆ ಸಂವಾದ**

ಈ ಸಂದರ್ಭದಲ್ಲಿ 'ಭಾರತ್ ಜೋಡೋ ಯುವ ಸಂಘ' ಸ್ಥಾಪನೆಗೆ ಸಂಬಂಧಿಸಿದಂತೆ ಯುವಕರೊಂದಿಗೆ ಪ್ರತ್ಯೇಕ ಸಭೆ ನಡೆಸಲಾಯಿತು. ಗ್ರಾಮದ ಸ್ವಚ್ಛತೆ, ಅರಣ್ಯ ಸಂರಕ್ಷಣೆ ಮತ್ತು ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ಯುವಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಅಧಿಕಾರಿಗಳು ಕರೆ ನೀಡಿದರು. ನಂತರ ಸಾರ್ವಜನಿಕರೊಂದಿಗೆ ನಡೆದ ಸಂವಾದದಲ್ಲಿ ಗ್ರಾಮಸ್ಥರು ಕುಡಿಯುವ ನೀರಿನ ಸಮಸ್ಯೆ, ರಸ್ತೆ ದುರಸ್ತಿ, ಮೇವು ಕೊರತೆ ಮತ್ತು ರೇಷನ್ ಕಾರ್ಡ್ ಸೇರಿದಂತೆ ವಿವಿಧ ಸಮಸ್ಯೆಗಳ ಬಗ್ಗೆ ಅಹವಾಲು ಸಲ್ಲಿಸಿದರು. ಈ ಭೇಟಿಯಲ್ಲಿ ಕಂದಾಯ, ಪಿಡಬ್ಲ್ಯೂಡಿ, ಆರೋಗ್ಯ, ಕೃಷಿ, ಪಂಚಾಯತ್ ರಾಜ್ ಮತ್ತು ಇತರ ಇಲಾಖೆಗಳ ಹಿರಿಯ ಅಧಿಕಾರಿಗಳು, ಗ್ರಾ.ಪಂ. ಅಧ್ಯಕ್ಷರು, ಸದಸ್ಯರು ಮತ್ತು ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.


### ಪರಿಹಾರಕ್ಕೆ ಸೂಚನೆ

ಜನರ ಅಹವಾಲುಗಳನ್ನು ಆಲಿಸಿದ ಜಿಲ್ಲಾಧಿಕಾರಿಗಳು, "ಗ್ರಾಮೀಣ ಜನರ ಸಮಸ್ಯೆಗಳೇ ನಮ್ಮ ಮೊದಲ ಆದ್ಯತೆ. ಸಲ್ಲಿಕೆಯಾದ ಪ್ರತಿಯೊಂದು ಮನವಿಗೂ 15 ದಿನದೊಳಗೆ ಪರಿಹಾರ ಕಲ್ಪಿಸಬೇಕು" ಎಂದು ತಾಲೂಕು ಮಟ್ಟದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಜಿಲ್ಲಾ ಪಂಚಾಯತ್ ಸಿಇಓ ಅವರು ಮಾತನಾಡಿ, "ಜಲಜೀವನ್ ಮಿಷನ್, ಗ್ರಾಮೀಣ ರಸ್ತೆ ಅಭಿವೃದ್ಧಿ ಮತ್ತು ಆರೋಗ್ಯ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಕಾಮಗಾರಿಯಲ್ಲಿ ಯಾವುದೇ ಲೋಪ ಕಂಡುಬಂದರೆ ಕಠಿಣ ಕ್ರಮ ಜರುಗಿಸಲಾಗುವುದು" ಎಂದು ಎಚ್ಚರಿಸಿದರು.

# ರಾಯಲ್ ಕಲಿಕಾ ಮಾರ್ಗದರ್ಶನ

ಮೈಸೂರು: ಶ್ರೀರಂಗಪಟ್ಟಣ ಬಳಿಯ ಪಾಲಹಳ್ಳಿಯಲ್ಲಿರುವ ಮೈಸೂರು ರಾಯಲ್ ತಾಂತ್ರಿಕ ಸಂಸ್ಥೆಯಲ್ಲಿ ವಿವಿಧ ವಿಭಾಗಗಳ ಏಳೂ ಸೆಮಿಸ್ಟರ್‌ಗಳ ಶಾಖಾವಾರು ಎಐ ಮೌಲ್ಯವರ್ಧಿತ ಕಲಿಕಾ ಮಾರ್ಗದರ್ಶನ ಯೋಜನೆ ರೂಪಿಸಿ ಜಾರಿಗೊಳಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಡಾ. ನಂದಿನಿ ಮೂರ್ತಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಿಟಿಯು ಪಠ್ಯಕ್ರಮದೊಡನೆ ಈ ಎಐ ತರಗತಿಗಳು ಸಹಾ ಇರುತ್ತವೆ. ಸೆಮಿಸ್ಟರ್‌ಗೆ 42 ಗಂಟೆಯಂತೆ ಏಳು ಹಂತಗಳಲ್ಲಿ 294 ಸಾಂಸ್ಥಿಕ ಸಂಪರ್ಕ ಗಂಟೆಗಳು ಒಳಗೊಂಡಿವೆ. ಇದಕ್ಕೇನೂ ಹೆಚ್ಚಿನ ಶುಲ್ಕವಿಲ್ಲ, ಸಂಸ್ಥೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೋಧಿಸಲಾಗುತ್ತದೆ. ಜೊತೆಗೆ, ಈ ಸೌಲಭ್ಯ ಇತರೆ ವಿದ್ಯಾರ್ಥಿಗಳಿಗೂ ವಿಸ್ತರಿಸುವ ಉದ್ದೇಶವಿದೆ ಎಂದರು. ಎಂಜಿನಿಯರಿಂಗ್ ಕುರಿತಂತೆ ಎಐ ಒಳಗೊಂಡ ಜ್ಞಾನ ಉದ್ಯೋಗಾವಕಾಶ ಹೆಚ್ಚಿಸುತ್ತದೆ. ಸ್ಪರ್ಧಾತ್ಮಕ ಜಗತ್ತಿಗೆ ಒಗ್ಗಿಕೊಳ್ಳುವಂತೆ ಮಾಡಲು ನೆರವಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕೆಂದರು. ಪ್ರಾಚಾರ್ಯ ಡಾ.ಅಭಿನಂದನ್, ಡಾ. ನಕುಲ್, ಡಾ.ಲಕ್ಷ್ಮಿ ದುರ್ಗಾ, ಡಾ.ರಾಮಲಿಂಗಯ್ಯ ಇದ್ದರು.



# ರಾಮನಗರ: ದಶ ಮಾತೃಕೆಯರ ಕರಗ ಮಹೋತ್ಸವ

## ಭಕ್ತಿ ಸಾಗರದಲ್ಲಿ ಮಿಂದೆದ್ದ ನಾಗರೀಕರು | ಬುಧವಾರ ಬೆಳಿಗ್ಗೆ ಅಗ್ನಿಕೊಂಡ ಮಹೋತ್ಸವ

ರಾಮನಗರ: ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಸೇರಿದಂತೆ ದಶ ಮಾತೃಕೆಯರ ಕರಗ ಮಹೋತ್ಸವದ ಹಿನ್ನೆಲೆಯಲ್ಲಿ ಇಡೀ ನಗರದಲ್ಲಿ ಹಬ್ಬದ ವಾತಾವರಣ ಸೃಷ್ಠಿಯಗಿದೆ. ಭಕ್ತಿ ಸಾಗರದಲ್ಲಿ ನಾಗರೀಕರು ಮಿಂದೇಳುತ್ತಿದ್ದಾರೆ. ಜಿಲ್ಲಾ ಕೇಂದ್ರ ರಾಮನಗರ ವಿದ್ಯುತ್ ದೀಪಗಳು, ತಳಿರು ತೋರಣಗಳಿಂದ ಶೃಂಗಾರಗೊಂಡಿದೆ.

**ಇಷ್ಟಾರ್ಥ ಸಿದ್ಧಿಗಾಗಿ ಶಕ್ತಿ ದೇವತೆಗಳಿಗೆ ಮೊರೆ**

ಕರಗ ಮಹೋತ್ಸವದ ಅಂಗವಾಗಿ ಮಂಗಳವಾರ ಸೂರ್ಯೋದಯಕ್ಕೂ ಮುನ್ನ ಆರಂಭಿಸಿ ಇಡೀ ದಿನ ಭಕ್ತರು ತಮ್ಮ ಕುಟುಂಬ ಸಮೇತ ದೇವಾಲಯಗಳಿಗೆ ಭೇಟಿ ಕೊಟ್ಟು ಶ್ರೀಮಾತೆಯನ್ನು ಪ್ರಾರ್ಥಿಸಿದರು. ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯದ ಮುಂಭಾಗ ಇರುವ ಬಲಿ ಪೀಠಕ್ಕೆ ಸುಮಂಗಲಿಯರು ನೀರು, ಮೊಸರು, ಬೆಲ್ಲ, ಬೇವಿನಸೊಪ್ಪು, ಹರಿಶಿನ, ಕುಂಕುಮ ಅರ್ಪಿಸಿದರು. ನಂತರ ದೇವಾಲಯದ ಒಳಗೆ ಶ್ರೀಮಾತೆಯನ್ನು ದರ್ಶಿಸಿ ತಂಬಿಟ್ಟಿನ ಆರತಿ ಬೆಳಗಿ ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿದರು.

ದೇವಾಲಯದ ಮುಂಭಾಗ ತತ್ಕಾಲಿಕವಾಗಿ ನಿರ್ಮಿಸಿರುವ ಅಗ್ನಿಕೊಂಡವನ್ನು ಕರಗ ಹಾಯುವುದರ ಮೂಲಕ ಕರಗ ಮಹೋತ್ಸವದ ಪ್ರಮುಖ ಘಟ್ಟ ಪೂರ್ಣಗೊಳ್ಳಲಿದೆ.






### ಗಮನ ಸೆಳೆದ ಅಲಂಕಾರ ಸೇವೆ

ಕರಗ ಮಹೋತ್ಸವದ ಅಂಗವಾಗಿ ಶ್ರೀ ಚಾಮುಂಡೇಶ್ವರಿ ಅಮ್ಮನರಿಗೆ ವಿಶೇಷ ಅಲಂಕಾರ ಏರ್ಪಡಿಸಲಾಗಿತ್ತು.ಇಡೀ ದೇವಾಲಯವನ್ನು ಬಗೆಬಗೆಯ ಹೂಗಳಿಂದ ಶೃಂಗರಿಸಲಾಗಿತ್ತು. ದೇವತಾ ಮೂರ್ತಿಗಳಿಗೆ ಅಲಂಕಾರ ನೆರೆವೇರಿಸುವ ನೈಪುಣ್ಯತೆಯನ್ನು ಪಡೆದು ಇಡೀ ದಕ್ಷಿಣ ಭಾರತದಲ್ಲಿ ಖ್ಯಾತಿಯಾಗಿರುವ ರಾಮನಗರ ಮೂಲದ ರಾಧಾಕೃಷ್ಣ ಶಾಸ್ತ್ರಿಯವರು ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ಅಲಂಕಾರ ನೆರವೇರಿಸಿದ್ದರು.


ಇದೇ ರೀತಿ ನಗರ ಪ್ರಧಾನದೇವತೆ ಶ್ರೀ ಬನ್ನಿಮಹಾಕಾಳಿ ಅಮ್ಮನವರಿಗೆ ಭೂತಕಿ ವಾಹನ ಅಲಂಕಾರ, ಭಂಡಾರಮ್ಮ ದೇವಿಗೆ ಗಾಯತ್ರಿದೇವಿ ಅಲಂಕಾರ, ಶೆಟ್ಟಿಹಳ್ಳಿ ರಸ್ತೆಯಲ್ಲಿರುವ ಆದಿಶಕ್ತಿಗೆ ದುರ್ಗಾದೇವಿ ಅಲಂಕಾರ, ಕೊಂಕಾಣಿ ದೊಡ್ಡಿಯಲ್ಲಿರುವ ಆದಿಶಕ್ತಿ ಅಮ್ಮನವರಿಗೆ ದುರ್ಗಾದೇವಿ ಅಲಂಕಾರ ಸೇವೆ ನೆರವೇರಿದೆ. ದೇವಾಲಯಗಳಿಗೆ ಭೇಟಿ ಕೊಟ್ಟ ಭಕ್ತರಿಗೆ ಭಕ್ತ ಸೇವಾ ಮಂಡಲಿಗಳು ಪ್ರಸಾದ ಸೇವೆಯ ವ್ಯವಸ್ಥೆ ಮಾಡಿಕೊಂಡಿದ್ದವು.

ಅಗ್ನಿಕೊಂಡಕ್ಕೆ ಸೌದೆ ಅಗತ್ಯವಿದ್ದು, ಅನೇಕ ಗ್ರಾಮಗಳಿಂದ ಭಕ್ತರು ಟ್ರಾಕ್ಟರ್‌ಗಳು ಮತ್ತು ಇತರ ವಾಹನಗಳಲ್ಲಿ ಟನ್ ಗಟ್ಟಲೆ ಸೌಧೆಯನ್ನು ಅರ್ಪಿಸುತ್ತಿದ್ದಾರೆ. ಇದರ ಜೊತೆಗೆ ಭಕ್ತರು ಹರಳು ಉಪ್ಪನ್ನು ಅಗ್ನಿಕೊಂಡಕ್ಕೆ ಸಮರ್ಪಿಸಿದರು.

**ಗಣ್ಯರ ಭೇಟಿ**

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಇಕ್ಬಾಲ್ ಹುಸೇನ್, ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ಸೇರಿದಂತೆ ವಿವಿಧ ಪಕ್ಷಗಳ ರಾಜಕೀಯ ಮುಖಂಡರು, ಜನಪ್ರತಿನಿಧಿಗಳು, ಸಮಾಜದ ವಿವಿಧ ಕ್ಷೇತ್ರಗಳ ಪ್ರಮುಖರು, ಗಣ್ಯರು ದೇವಾಲಯಗಳಿಗೆ ಭೇಟಿ ಕೊಟ್ಟು ತಮ್ಮ ಭಕ್ತಿ ನಿವೇದಿಸಿಕೊಂಡರು.

ದಶ ಮಾತೃಕೆಯರ ಕರಗ ಮಹೋತ್ಸವಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು, ಸುತ್ತಮುತ್ತಲ ಜಿಲ್ಲೆಗಳು ಮತ್ತು ಬೆಂಗಳೂರು ನಗರದಿಂದ ಲಕ್ಷಾಂತರ ಮಂದಿ ಭೇಟಿ ಕೊಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆ 1500ಕ್ಕೂ ಹೆಚ್ಚು ಮಂದಿ ಪೊಲೀಸರನ್ನು ನಿಯೋಜಿಸಿದೆ. ಹೋಂಗಾರ್ಡುಗಳ ಸೇವೆಯನ್ನು ಪಡೆದುಕೊಳ್ಳಲಾಗಿದೆ. ಯಾವುದೇ ಅಹಿತಕರ ಘಟನೆಗೆ ಅವಕಾಶವಾಗದಂತೆ ಎಲ್ಲ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳಲಾಗಿದೆ.



### ಸಾಂಸ್ಕೃತಿಕ ಕಾರ್ಯಕ್ರಮ ಸುದೀಪ್, ರಚಿತಾರಾಂ, ಗಿಲ್ಲಿ ನಟ


ನಗರದ ಅರಳಿ ಮರದ ವೃತ್ತ, ಜಿಲ್ಲಾ ಕ್ರೀಡಾಂಗಣಗಳಲ್ಲಿ ಕರಗ ಮಹೋತ್ಸವದ ಅಂಗವಾಗಿ ಸಂಗೀತ ಸಂಜೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜೂನಿಯರ್ ಕಾಲೇಜು ಮೈದಾನದಲ್ಲಿ ಬಗೆಬಗೆಯ ಮನರಂಜಾ ಆಟಗಳನ್ನು ಸ್ಥಾಪಿಸಲಾಗಿದೆ. ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿರುವ ನಗರ ಮಿನಿ ದಸರೆಯ ಸ್ವರೂಪ ಪಡೆದುಕೊಂಡಿದೆ. ಜಿಲ್ಲಾ ಕ್ರೀಡಾಂಗಣದಲ್ಲಿ ಮೂಸಿಕಲ್ ನೈಟ್ ಅನ್ನು ಶಾಸಕ ಇಕ್ಬಾಲ್ ಹುಸೇನ್ ಅವರ ನೇತೃತ್ವದಲ್ಲಿ ಆಯೋಜನೆಯಾಗಿದೆ. ಬೃಹತ್ ವೇದಿಕೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಚಿತ್ರ ನಟ ಸುದೀಪ್, ರಚಿತಾರಾಂ, ಗಿಲ್ಲಿ ನಟ ಸೇರಿದಂತೆ ಖ್ಯಾತ ನಟ, ನಟಿಯರು ಭಾಗವಹಿಸಿದ್ದರು

### ದಶ ಮಾತೃಕೆಯರ ಕರಗೋತ್ಸವ

ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಮಹೋತ್ಸವದ ದಿನಂದಂದೇ ನಗರದ ವಿವಿಧ ಬಡಾವಣೆಗಳಲ್ಲಿ ಭಕ್ತ ಸಂರಕ್ಷಣಾರ್ಥ ನೆಲೆಸಿರುವ ಶಕ್ತಿ ದೇವತೆಗಳಾದ ಆದಿಶಕ್ತಿ (ಐಜೂರು ದೇವಾಲಯ), ಬಿಸಿಲು ಮಾರಮ್ಮ, ಮಗ್ಗದ ಕೇರಿ ಮಾರಮ್ಮ, ಭಂಡಾರಮ್ಮ ದೇವಿ, ಮುತ್ತುಮಾರಮ್ಮ, ಆದಿಶಕ್ತಿ (ಶೆಟ್ಟಿಹಳ್ಳಿ ದೇವಾಲಯ), ಆದಿಶಕ್ತಿ (ಕೊಂಕಾಣಿ ದೊಡ್ಡಿ ದೇವಾಲಯ), ಹಳೆಯೂರಮ್ಮ ಮತ್ತು ಮಾಸ್ತಮ್ಮ ದೇವಿ ಕರಗ ಮಹೋತ್ಸವಗಳು ಸಹ ನಡೆಯುತ್ತಿದೆ. ಮಂಗಳವಾರ ಬೆಳಿಗ್ಗೆ ಕರಗಧಾರಕರು ಮಡಿ ನೀಡು ಕೈಂಕರ್ಯವನ್ನು ನೆರವೇರಿಸಿದರು.

### ಬುಧವಾರ ಬೆಳಿಗ್ಗೆ ಅಗ್ನಿಕೊಂಡೋತ್ಸವ

ಮಂಗಳವಾರ ಸಂಜೆ ಸಿಂಗ್ರಾಬೋವಿ ದೊಡ್ಡಿಯಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಹೊರಡಲಿದೆ. ಈ ಬಾರಿಯೂ ದೇವಿ ಪ್ರಸಾದ್ ಕರಗಧಾರಕರಾಗಿದ್ದಾರೆ. ಕರಗ ಇಡೀ ರಾತ್ರಿ ನಗರದ ವಿವಿಧ ಬಡಾವಣೆಗಳಿಗೆ ಭೇಟಿ ಕೊಟ್ಟು ಭಕ್ತರಿಂದ ಪೂಜೆ ಸ್ವೀಕರಿಸಿದ ನಂತರ ಬುಧವಾರ ಬೆಳಿಗ್ಗೆ ದೇವಾಲಯದ ಬಳಿ ನಿರ್ಮಿಸಿರುವ ಅಗ್ನಿಕೊಂಡವನ್ನು ಹಾಯ್ದು ಪುನಃ ದೇವಾಯವನ್ನು ಸೇರಲಿದೆ.





# ಶೀಘ್ರವೇ ನಿಮಾನ್ಸ್ ನಿರ್ಮಿಸಿ



ಮೈಸೂರು: ವರುಣ ಹೋಬಳಿ ಗುಡುಮಾದನ ಹಳ್ಳಿ ಗ್ರಾಮದಲ್ಲಿಯೇ ನಿಮಾನ್ಸ್ ಘಟಕ ಶೀಘ್ರವೇ ನಿರ್ಮಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು ಎಂದು ಜಿಲ್ಲಾ ಮಹಿಳಾ ಸಂಘಟನೆಗಳ ಒಕ್ಕೂಟ ಎಚ್ಚರಿಸಿದೆ.

ನಗರದಲ್ಲಿ ಜಿಲ್ಲಾಧ್ಯಕ್ಷರಾದ ಉಮಾ ಮಹೇಶ್ವರಿ ಮಾತನಾಡಿ, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಜನತೆಗೆ ಅನುಕೂಲವಾಗಲೆಂದು ಅಂದಿನ ಸಿಎಂ ಸಿದ್ದರಾಮಯ್ಯ ಅವರು 100 ಕೋಟಿ ವೆಚ್ಚದಲ್ಲಿ ಗುಡುಮಾದನಹಳ್ಳಿಯಲ್ಲಿ ನಿಮಾನ್ಸ್ ಘಟಕ ತೆರೆಯಲು ಅನುಮೋದನೆ ನೀಡಿದ್ದರು. ಆದರೆ ಸ್ವಹಿತಾಸಕ್ತಿಗಳ ವಿರೋಧದ ಕಾರಣ ನಿರ್ಮಾಣ ಇನ್ನೂ ಆರಂಭವಾಗಿಲ್ಲ. ಹೀಗಾಗಿ ಕೂಡಲೇ ಕಾಮಗಾರಿ ಆರಂಭಿಸಬೇಕೆಂದು ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ಆರ್. ಅಂಜಲಿ ಮಾತನಾಡಿ, ಜಾಗದಲ್ಲಿ ಕೃಷಿ ಚಟುವಟಿಕೆ ಕೈಗೊಂಡಿರುವುದಾಗಿ ಹೇಳುತ್ತ ನಿರ್ಮಾಣ ವಿರೋಧಿಸುವವರು ಈಗಾಗಲೇ ಆ ಜಮೀನುಗಳಲ್ಲಿ ಸಾಕಷ್ಟು ಸಂಪಾದನೆ ಮಾಡಿದ್ದಾರೆ. ಇವರು ನಿಜವಾದ ಕೃಷಿಕರೇ ಆಗಿದ್ದರೆ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತಮ್ಮ ಜಮೀನುಗಳನ್ನು ಕೋಟಿಗಟ್ಟಲೆಗೆ ಏಕೆ ಮಾರುತ್ತಿದ್ದರು ಎಂದು ಪ್ರಶ್ನಿಸಿದರು. ಆರ್.ವಸಂತಕುಮಾರಿ, ಭಾಗ್ಯಲಕ್ಷ್ಮಿ, ಪವಿತ್ರ, ದಾಕ್ಷಾಯಿಣಿ ಇದ್ದರು.

# 4 ರಾಜ್ಯದ ಸಿಎಂಗಳ ಸಭೆ ಕರೆಯಿರಿ



ಮೈಸೂರು: ಕಾವೇರಿ ವಿವಾದ ಬಗೆಹರಿಸಲು ಸಂಕಷ್ಟ ಸೂತ್ರವೊಂದೇ ಪರಿಹಾರ ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಸಲಹೆ ನೀಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಾವೇರಿ ಜಲವಿವಾದದ ನ್ಯಾಯಾಧೀಕರಣವಾಗಲೀ, ಸರ್ವೋಚ್ಚ ನ್ಯಾಯಾಲಯವಾಗಲೀ ಸಂಕಷ್ಟ ಬಂದಾಗ ತಮ್ಮ ತೀರ್ಪಿನಲ್ಲಿ ನೀರು ಹಂಚಿಕೆ ಮಾಡುವ ಬಗ್ಗೆ ಸ್ಪಷ್ಟ ಆದೇಶ ಮಾಡದೇ ಇರುವುದೇ ಈ ಸಮಸ್ಯೆಗೆ ಕಾರಣವಾಗಿದೆ. ಹೀಗಾಗಿ ಕಾವೇರಿ ವಿವಾದದ ಪಕ್ಷಗಾಶರರಾದ ನಾಲ್ಕೂ ರಾಜ್ಯಗಳ ಸಿಎಂಗಳ ಸಭೆ ಕರೆದು ಸಂಕಷ್ಟ ಸೂತ್ರ ರೂಪಿಸಲು ಮುಂದಾಗಬೇಕು. ಇಲ್ಲವೇ ನಾಲ್ಕು ರಾಜ್ಯಗಳ ಸಿಎಂಗಳು ಪರಸ್ಪರ ಮಾತುಕತೆ ಮೂಲಕ ಸ್ಪಷ್ಟ ಸೂತ್ರ ರೂಪಿಸಿಕೊಳ್ಳಬೇಕು. ವಿವಾದ ಬಗೆಹರಿಯದೇ ಇದ್ದರೆ ಸಂಕಷ್ಟ ಸೂತ್ರಕ್ಕಾಗಿಯೇ ಪ್ರತ್ಯೇಕ ನ್ಯಾಯಾಧೀಕರಣ ರಚಿಸಬೇಕೆಂದು ಕಿವಿಮಾತು ಹೇಳಿದರು.

ಈ ನಿಟ್ಟಿನಲ್ಲಿ ನಾಲ್ಕೂ ರಾಜ್ಯಗಳ ರೈತರೇ ರಚಿಸಿಕೊಂಡಿರುವ ಕಾವೇರಿ ಕುಟುಂಬಕ್ಕೆ ಮರುಜೀವ ನೀಡಿ, ರೈತರೇ ಪರಸ್ಪರ ಮಾತುಕತೆ ನಡೆಸಲು ರಾಜ್ಯ ರೈತ ಸಂಘ ಆಲೋಚನೆ ಮಾಡಿದ್ದು, ಈ ಸಂಬಂಧ ಸದ್ಯದಲ್ಲೇ ಪೂರ್ವಭಾವಿ ಸಭೆ ನಡೆಸಲಾಗುವುದೆಂದರು.

ಬಳಿಕ, ರೈತ, ಕಾರ್ಮಿಕ ವಿರೋಧೀ ನೀತಿಗಳ ವಿರುದ್ಧ ಕ್ವಿಟ್ ಇಂಡಿಯಾ ಚಳವಳಿ ಮಾದರಿಯಲ್ಲಿ ಕಾರ್ಪೊರೇಟ್ ಕಂಪನಿಗಳೇ ದೇಶ ಬಿಟ್ಟು ತೊಲಗಿ ಎಂದು ಸಂಯುಕ್ತ ಕಿಸಕಾನ್ ಮೋರ್ಚಾ, ಜಂಟಿ ಕಾರ್ಮಿಕ ಸಂಗಟನೆಗಳು ಚಳವಳಿಯನ್ನು ಆ. 10 ರಂದು ರಾಷ್ಟ್ರಾದ್ಯಂತ ಹಮ್ಮಿಕೊಂಡಿದ್ದು, ಅಂದು ಬೆಳಗ್ಗೆ 11ಕ್ಕೆ ನಗರದ ಮಹಾರಾಜ ಕಾಲೇಜು ಮೈದಾನದಿಂದ ರೈಲ್ವೆ ನಿಲ್ದಾಣದವರೆಗೆ ಬೃಹತ್ ಮೆರವಣಿಗೆ ಹಮ್ಮಿಕೋಳಲಾಗಿದೆ ಎಂದು ಮಾಹಿತಿ ನೀಡಿದರು. ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ಪಿ. ಮರಂಕಯ್ಯ, ಮಂಡಕಳ್ಳಿ ಮಹೇಶ್ ಇದ್ದರು.

# ಸಂವಿಧಾನ ಅಧ್ಯಯನ ಪ್ರತಿಯೊಬ್ಬರ ಆದ್ಯ ಕರ್ತವ್ಯ

### ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ವೆಂಕಟರಮಣಸ್ವಾಮಿ(ಪಾಪು)



ಚಾಮರಾಜನಗರ,ಸಂವಿಧಾನ ಅಧ್ಯಯನ ಮಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದ್ದು, ಸಂವಿಧಾನ ಅಧ್ಯಯನ ಮಾಡುವುದರಿಂದ ಪ್ರತಿಯೊಬ್ಬರು ಉತ್ತಮ ಬದುಕು ಕಟ್ಟಿಕೊಳ್ಳುವ ಅವಕಾಶವಿದೆ ಅದನ್ನು ರಕ್ಷಣೆ ಮಾಡುವ ಮಹತ್ವದ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ದಲಿತ ಮಹಾಸಭೆ ರಾಜ್ಯ ಉಪಾಧ್ಯಕ್ಷ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ವೆಂಕಟರಮಣಸ್ವಾಮಿ(ಪಾಪು) ಅಭಿಪ್ರಾಯಪಟ್ಟರು.

ತಾಲ್ಲೂಕಿನ ಮಲ್ಲಯ್ಯನಪುರ ಸಮೀಪದ ಸರ್ಕಾರಿ ಪದವಿಪೂರ್ವ ಕಾಲೇಜು ಆದರ್ಶ ವಿದ್ಯಾಲಯದಲ್ಲಿ ಜಿಲ್ಲಾ ಜನಹಿತಾಶಕ್ತಿ ಹೋರಾಟ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ' ಸಂವಿಧಾನ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಅವರು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ, ವಿವಿಧ ದೇಶಗಳ ಸಂವಿಧಾನ ಅಧ್ಯಯನ ಮಾಡಿ, ಭಾರತದ ಅಭಿವೃದ್ಧಿಗೆ ಪೂರಕವಾದ ಸುಭದ್ರ ಸಂವಿಧಾನ ರಚನೆಮಾಡಿ, ದೇಶಕ್ಕೆ ಅರ್ಪಣೆ ಮಾಡಿದ್ದಾರೆ. ಅಮೂಲ್ಯವಾದ ಸಂವಿಧಾನವನ್ನು 1949 ನ.26 ರಂದು ಅಂಬೇಡ್ಕರ್ ದೇಶಕ್ಕೆ ಸಮರ್ಪಣೆ ಮಾಡಿದರು. 1950 ಜ.26 ರಂದು ಅದನ್ನು ಅಧಿಕೃತವಾಗಿ ಜಾರಿಗೆ ತರಲಾಯಿತು.. ಮಾನವೀಯ ಮೌಲ್ಯಗಳ ಆಗರವಾಗಿರುವ ಸಂವಿಧಾನದ ಮೂಲ ಆಶಯಗಳನ್ನು ನಾವು ಪಾಲನೆ ಮಾಡುವ ಅಗತ್ಯವಿದೆ ಎಂದರು.ಶಾಲಾಕಾಲೇಜಿನ ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಲ್ಲೇ ಅಂಬೇಡ್ಕರ್ ರಚಿಸಿರುವ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಅಳವಡಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿಯಲ್ಲಿ ಸಂವಿಧಾನವನ್ನು ಅಧ್ಯಯನ ಮಾಡಬೇಕು, ಸಂವಿಧಾನದಲ್ಲಿ ವಿದ್ಯಾರ್ಥಿಗಳಿಗೆ ಅನೇಕ ಅಂಶಗಳಿವೆ. ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಸಂವಿಧಾನದ ಅರಿವು ಅತ್ಯಂತ ಉಪಯುಕ್ತವಾಗಿದೆ ಎಂದರು.

ಜಿಲ್ಲಾ ಲೇಖಕರ ಸಂಘದ ಅಧ್ಯಕ್ಷ ದುಂಡುಮಾದಯ್ಯ ಅವರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿ, ದೇಶದ ಕಟ್ಟಕಡೆಯ ಪ್ರಜೆಗಳಿಗೂ ಸಂವಿಧಾನ ಅರಿವು ಅಗತ್ಯವಿದೆ. ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿಯಲ್ಲಿ ಸಂವಿಧಾನವನ್ನು ಅಧ್ಯಯನ ಮಾಡಬೇಕು ವಿದ್ಯಾರ್ಥಿಗಳು ಮೌಲ್ಯಯುತ ಶಿಕ್ಷಣಪಡೆಯುವುದರ ' ಜೊತೆಗೆ ಸಂಸ್ಕಾರ ರೂಡಿಸಿಕೊಳ್ಳಬೇಕು, ಗುರುಹಿರಿಯರಿಗೆ ಗೌರವ ನೀಡಬೇಕು ಎಂದರು.

ಎಸ್‌ಡಿಎಂಸಿ ಸದಸ್ಯ ಎಂ.ಮಹೇಶ್ ಮಾತನಾಡಿ, ಸಂವಿಧಾನದಲ್ಲಿ ವಿದ್ಯಾರ್ಥಿಗಳಿಗೆ ಸಂವಿಧಾನದ ಅರಿವು ಅತ್ಯಂತ ಉಪಯುಕ್ತವಾಗಿದೆ. ಇಂದು ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೂ ಶಿಕ್ಷಣವನ್ನೇ ಅವಲಂಬಿಸಬೇಕು, ಶಿಕ್ಷಣಕ್ಕೆ ಅಂತಹ ಮಹತ್ವದ ಸ್ಥಾನವಿದೆ. ಶಿಸ್ತು, ಸಮಯಪ್ರಜ್ಞೆ ಜೀವನದಲ್ಲಿ ಅಳವಡಿಸಿಕೊಂಡಾಗ ಯಶಸ್ಸು ತಮ್ಮದಾಗಲಿದೆ ಎಂದರು. ಜನಹಿತಾಶಕ್ತಿ ಹೋರಾಟವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್ ಮಾತನಾಡಿ, ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಭಾರತದ ಸಂವಿಧಾನದ ಮಹತ್ವದ ಬಗ್ಗೆ ಅರಿವು ಮೂಡಿಸುವುದೇ ಕಾರ್ಯಕ್ರಮದ ಉದ್ದೇಶವಾಗಿದೆ. ಎಂದರು. ಪ್ರಾಂಶುಪಾಲ ಸಿ.ಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಶಿಕ್ಷಕ ವಿ.ಜಿ, ತ್ಯಾಗರಾಜು,. ಜನಹಿತಾಶಕ್ತಿ ಹೋರಾಟವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಡಳ್ಳಿನಾಗರಾಜ್, ಕಾಲೇಜು ವಿದ್ಯಾರ್ಥಿಗಳು ಸಹಶಿಕ್ಷಕರು, ಉಪನ್ಯಾಸಕರು ಹಾಜರಿದ್ದರು.

# ಹುಲಿ ದಾಳಿಗೆ ಕರು ಬಲಿ: ರೈತರಲ್ಲಿ ಆತಂಕ

ಗುಂಡ್ಲುಪೇಟೆ: ತಾಲೂಕಿನ ತೊಂಡವಾಡಿ ಗ್ರಾಮದಲ್ಲಿ ಹಗಲು ಹೊತ್ತಲ್ಲೇ ಹುಲಿ ದಾಳಿ ನಡೆಸಿ ಕರುವನ್ನು ಕೊಂದು ಹಾಕಿರುವ ಘಟನೆ ನಡೆದಿದೆ. ಇದರಿಂದ ರೈತರು ಭಯಭೀತರಾಗಿದ್ದಾರೆ.

ಗ್ರಾಮದ ರೈತ ಲೋಕೇಶ್ ಅವರಿಗೆ ಸೇರಿದ ಕರು ಇದಾಗಿದ್ದು, ಎಂದಿನಂತೆ ಜಮೀನಿನಲ್ಲಿ ಕರುವನ್ನು ಮೇಯಲು ಬಿಟ್ಟಿದ್ದ ವೇಳೆ ಹಾಡುಹಗಲೇ ಹುಲಿ ದಾಳಿ ನಡೆಸಿ ಕೊಂದು ಹಾಕಿದೆ. ಹುಲಿ ದಾಳಿ ನಡೆಸಿರುವುದರಿಂದ ರೈತರು ತಮ್ಮ ಜಮೀನುಗಳಿಗೆ ಹೋಗಲು ಭಯಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರು ಜೀವಭಯದಲ್ಲೇ ದಿನ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮಸ್ಥರು ಮಾಹಿತಿ ತಿಳಿಸಿದ ತಕ್ಷಣ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ವಲಯದ ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿದ್ದಾರೆ. ಹುಲಿಯನ್ನು ಕೂಡಲೇ ಸೆರೆ ಹಿಡಿದು ಗ್ರಾಮಸ್ಥರ ಆತಂಕ ನಿವಾರಿಸುವಂತೆ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದಾರೆ.



# ಹಡಪದ ಅಪ್ಪಣ್ಣ ಅವರ 892ನೇ ಜಯಂತಿ



**ಕೊಳ್ಳೇಗಾಲ:** ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶ್ರೀ ಶಿವಶರಣ ಹಡಪದ ಅಪ್ಪಣ್ಣ ಅವರ 892ನೇ ಜಯಂತಿ ಸಮಾರಂಭವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಉದ್ಘಾಟಿಸಿ, ಹಡಪದ ಅಪ್ಪಣ್ಣ ಅವರ ಜೀವನ, ಆದರ್ಶಗಳು ಹಾಗೂ ಸಮಾಜಕ್ಕೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

12ನೇ ಶತಮಾನದ ಶರಣ ಪರಂಪರೆಯಲ್ಲಿ ಶಿವಶರಣ ಹಡಪದ ಅಪ್ಪಣ್ಣ ಅವರು ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಅವರು ತಮ್ಮ ಸರಳ ಜೀವನ, ಕಾಯಕ ನಿಷ್ಠೆ ಹಾಗೂ ಸಾಮಾಜಿಕ ಸಮಾನತೆಯ ಸಂದೇಶದ ಮೂಲಕ ಸಮಾಜಕ್ಕೆ ಮಹತ್ವದ ಮಾರ್ಗದರ್ಶನ ನೀಡಿದ್ದಾರೆ ಎಂದು ಹೇಳಿದರು. ಶರಣರ ತತ್ವಗಳು ಇಂದಿನ ಸಮಾಜಕ್ಕೂ ಪ್ರಸ್ತುತವಾಗಿದ್ದು, ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದಲ್ಲಿ ಸಾಮರಸ್ಯ, ಸಹಬಾಳ್ವೆ ಹಾಗೂ ಸಮಾನತೆಯನ್ನು ಬೆಳೆಸುವಲ್ಲಿ ಶರಣರ ಚಿಂತನೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಸಾಹಿತಿ ಹಿಂದ್ವಾಡಿ ಶಿವಣ್ಣ ಅವರು ಹಡಪದ ಅಪ್ಪಣ್ಣ ಅವರ ಜೀವನ ಚರಿತ್ರೆ ಕುರಿತು ಉಪನ್ಯಾಸ ನೀಡಿದರು. ಹಡಪದ ಅಪ್ಪಣ್ಣ ಅವರು ಬಸವಣ್ಣನವರ ಸಮಕಾಲೀನ ಶರಣರಾಗಿದ್ದು, ಕಾಯಕ ಮತ್ತು ದಾಸೋಹದ ತತ್ವಗಳನ್ನು ಪಾಲಿಸಿ ಜನರಲ್ಲಿ ಜಾಗೃತಿ ಮೂಡಿಸಿದ ಮಹಾನ್ ವ್ಯಕ್ತಿ ಎಂದರು. ಶರಣರ ವಚನ ಸಾಹಿತ್ಯ, ಅವರ ಸಾಮಾಜಿಕ ಚಿಂತನೆಗಳು ಹಾಗೂ ಮಾನವೀಯ ಮೌಲ್ಯಗಳ ಕುರಿತು ವಿವರಿಸಿದ ಅವರು, ಇಂದಿನ ಯುವ ಪೀಳಿಗೆ ಶರಣರ ಆದರ್ಶಗಳನ್ನು ಅರಿತುಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಸವಿತಾ ಸಮಾಜದ ಅಧ್ಯಕ್ಷ ತಮ್ಮಯ್ಯ, ಸವಿತಾ ಸಮಾಜ ಮಹಿಳಾ ಸಂಘ ಅಧ್ಯಕ್ಷೆ ದೊಡ್ಡತಾಯಮ್ಮ ಸೇರಿದಂತೆ ಮುಖಂಡರು ಇತರರು ಇದ್ದರು.

### ಚಾಮುಂಡೇಶ್ವರಿಗೆ ಮಡಿಲಕ್ಕಿ ಸೇವೆ ಸಲ್ಲಿಸಿದ ಸುಮಂಗಲಿಯರು

# ವಜ್ರಾಂಗಿ ವಿಶ್ವರೂಪಿಯಾಗಿ ಶ್ರೀಚಾಮುಂಡೇಶ್ವರಿ

ಚಾಮರಾಜನಗರ, ನಾಡದೇವಿ ಶ್ರೀಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿರುವ ಶ್ರೀಚಾಮುಂಡೇಶ್ವರಿ ಅಮ್ಮನವರಿಗೆ ವಜ್ರಾಂಗಿ ವಿಶ್ವರೂಪಿ ಅಲಂಕಾಲ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮುಂಜಾನೆಯೇ ದೇವಿಗೆ ಪ್ರಾತ:ಕಾಲದಲ್ಲಿ ಪಂಚಾಮೃತ ಅಭಿಷೇಕ, ಲಿಲತಾ ಸಹಸ್ರಾನಾಮ, ಖಡ್ಗಾಮಾಲಾರ್ಚನೆ ಮಾಡಿ. ದೇವಿಗೆ ವಿಶೇಷವಾಗಿ ವಜ್ರಾಂಗಿ ವಿಶ್ವರೂಪಿ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಲಾಯಿತು.

ಭಕ್ತರು ಸರತಿಸಾಲಿನಲ್ಲಿ ದೇವರಿಗೆ ಪೂಜೆ. ಸಲ್ಲಿಸಿದರು. ಸುಮಂಗಲಿಯರು ನಿಂಬೆಹಣ್ಣಿನ ಆರತಿ ಬೆಳಗಿದರು. ದೇವಸ್ಥಾನದ ಆಗಮಿಕ ನಾಗರಾಜ್ ದೀಕ್ಷಿತ್ ಮಾತನಾಡಿ, ಆಷಾಢ ಮಾಸದಲ್ಲಿ ಬರುವ ರೇವತಿ ನಕ್ಷತ್ರದಲ್ಲಿ ಚಾಮುಂಡೇಶ್ವರಿ ವರ್ಧಂತಿ ಆಚರಣೆ ಮಾಡಲಾಗುತ್ತದೆ. ಇಂದು ದೇವಿಗೆ ಪ್ರಾತ:ಕಾಲದಲ್ಲಿ ಪಂಚಾಮೃತ ಅಭಿಷೇಕ, ಲಿಲತಾ ಸಹಸ್ರಾನಾಮ, ಖಡ್ಗಾ ಮಾಲಾರ್ಚನೆ ಮಾಡಿ. ದೇವಿಗೆ ವಿಶೇಷವಾಗಿ ವಜ್ರಾಂಗಿ ವಿಶ್ವರೂಪಿ ಅಲಂಕಾರ ಮಾಡಿ ವಿಶೇಷಪೂಜೆ ಸಲ್ಲಿಸಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಲಾಗಿದೆ. ಆಗಾಗಿ ವಿಶೇಷವಾಗಿ ಯಾರು ದರ್ಶನ ಮಾಡುತ್ತಾರೋ ಅವರಿಗೆ ಅನುಗ್ರಹ ಆಗುತ್ತದೆ ಇಂದು ಮಂಗಳವಾರ ಎಲ್ಲ ಕಾರ್ಯಗಳು ಮಂಗಳ ಆಗಬೇಕು ವಿಶೇಷವಾದರಿಂದ ಸುಮಂಗಲಿಯರು ಮಡಿಲು ತುಂಬಿದರು ಎಂದರು.



ದೇವಿಗೆ ಮಡಿಲಕ್ಕಿ ಸೇವೆ ಸಲ್ಲಿಸಿದ ರೇಖಾ ಮಾತನಾಡಿ, ಇಷ್ಟಾರ್ಥ ಸಿದ್ಧಿ ಗಾಗಿ ಚಾಮುಂಡೇಶ್ವರಿ ಮಡಿಲಕ್ಕಿ ಸೇವೆ ಸಲ್ಲಿಸಲಾಗಿದೆ. ದೇವಿ ಸರ್ವರಿಗೂ ಸನ್ಮಂಗಳ ಉಂಟು ಮಾಡಲಿ ಎಂದು ದೇವಿಯಲ್ಲಿ ಪ್ರಾರ್ಥಿಸಿದರು

**ಅನ್ನಸಂತರ್ಪಣೆ:** ಶ್ರೀಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಪ್ರತಿವರ್ಷದಂತೆ ಈ ಬಾರಿಯುಅನ್ನಸಂತರ್ಪಣೆ ನಡೆಯಿತು.

## ಆಗಸ್ಟ್ 9 ಗುಡ್ ವಾಯ್ಸ್ ಶಾಲಾ ವಾರ್ಷಿಕೋತ್ಸವ ಸನ್ಮಾನ

**ಮಂಡ್ಯ:** ನಗರದ ಹೊಸಹಳ್ಳಿ ರಸ್ತೆಯಲ್ಲಿರುವ ಗುಡ್ ವಾಯ್ಸ್ ವಾದ್ಯ ಸಂಗೀತ ಶಾಲೆಯ ವಾರ್ಷಿಕೋತ್ಸವ ಹಾಗೂ ಸಾಧಕರಿಗೆ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ವನ್ನು ನಗರದ ಗಾಂಧೀಭವನದಲ್ಲಿ ಏರ್ಪಡಿಸಲಾಗಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ವನ್ನು ಎಲ್ಲರೂಳಗೊಂದಾಗು ಮಂಕುತಿಮ್ಮ ಟ್ರಸ್ಟ್ ನ ಅಧ್ಯಕ್ಷ ಎಂ. ವಿನಯ್ ಕುಮಾರ್ ಉದ್ಘಾಟಿಸ ಲಿದ್ದು ಅಧ್ಯಕ್ಷ ತೆಯನ್ನು ಖ್ಯಾತ ವೈದ್ಯ ಉಮೇಶ್ ವಹಿಸಲಿದ್ದು. ಮುಖ್ಯ ಅತಿಥಿ ಗಳಾಗಿ ಪ್ರೇರಣ ಶಾಲೆಯ ಟ್ರಸ್ಟಿ ರವಿಕುಮಾರ್, ಗಾಮನಹಳ್ಳಿಯ ಲೆಕ್ಕ ಪರಿಶೋಧಕ ಚಿಕ್ಕ ಮಹದೇವು, ಕೆನರಾ ಬ್ಯಾಂಕ್ ನ ನಿವೃತ್ತ ಮೆನೇಜರ್ ಚಂದ್ರಹಾಸ್, ಭಾಗವಹಿಸುವರು.

ಇದೆ ಸಂದರ್ಭದಲ್ಲಿ ಜಾನಪದ ಗಾಯಕ ನಿವೃತ್ತ ಶಿಕ್ಷಕ ಶಿವನ ಗೌಡ ಪಾಟೀಲ್ ಚನ್ನರಾಯಪಟ್ಟಣ, ಹಾಗೂ ರಂಗ ಭೂಮಿಯ ಹಿರಿಯ ತಬಲಾ ಕಲಾವಿದ ಜಿ. ಗಣೇಶ್, ಮಂಡ್ಯ ಅವರುಗಳನ್ನು ಉಪನ್ಯಾಸಕ ಕೆ.ಸಿ. ಬಸವರಾಜು ಮತ್ತು ಗಣ್ಯರು ಅಭಿನಂದಿಸುವರು. ಕಾರ್ಯಕ್ರಮ ದಲ್ಲಿ ಹಿರಿಯ ಗಾಯಕ, ಗಮಕಿ ಕಲಾಶ್ರೀ ಸಿ. ಪಿ. ವಿದ್ಯಾಶಂಕರ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು ಎಂದು ಗುಡ್ ವಾಯ್ಸ್ ಸಂಸ್ಥೆಯ ವ್ಯವಸ್ಥಾಪಕ, ತರಬೇತಸಿ. ದೇವರಾಜ್ ತರಬೇತುದಾರ ಸಿ.ದೇವರಾಜ್ ತಿಳಿಸಿದ್ದಾರೆ.

## ಕೊಡಗು ಜಿಲ್ಲೆಯ ಮಳೆ ವಿವರ

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 8.90 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 11.08 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 1084.01 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 2173.95 ಮಿ.ಮೀ ಮಳೆಯಾಗಿತ್ತು.

ಮಡಿಕೇರಿ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 32.40 ಮಿ.ಮೀ. ಕಳೆದ ವರ್ಷ ಇದೇ ದಿನ 14.40 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1697.64 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 3269.50 ಮಿ.ಮೀ. ಮಳೆಯಾಗಿತ್ತು.

ವಿರಾಜಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 4.50 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 10.60 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1020.37 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 1983 ಮಿ.ಮೀ. ಮಳೆಯಾಗಿತ್ತು.

ಪೊನ್ನಂಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 2.10 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 8.83 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1037.14 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 2043.32 ಮಿ.ಮೀ. ಮಳೆಯಾಗಿತ್ತು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 3.10 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 11.05 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1192.78 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 2467.17 ಮಿ.ಮೀ. ಮಳೆಯಾಗಿತ್ತು.

ಕುಶಾಲನಗರ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 2.40 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 10.50 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 471.94 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 1106.69 ಮಿ.ಮೀ. ಮಳೆಯಾಗಿತ್ತು.

ಜಿಲ್ಲೆಯಲ್ಲಿ ಹೋಬಳಿವಾರು ದಾಖಲಾಗಿರುವ ಮಳೆ ವಿವರ:– ಮಡಿಕೇರಿ 20.90, ನಾಪೋಕ್ಲು 21.80, ಸಂಪಾಜೆ 34.80, ಭಾಗಮಂಡಲ 47.60, ವಿರಾಜಪೇಟೆ 5.40, ಅಮ್ಮತ್ತಿ 3.40, ಹುದಿಕೇರಿ 66.80, ಶ್ರೀಮಂಗಲ 1.10, ಪೊನ್ನಂಪೇಟೆ 0.50, ಬಾಳೆಲೆ 0.30, ಸೋಮವಾರಪೇಟೆ 1, ಶನಿವಾರಸಂತೆ 0.40, ಶಾಂತಳ್ಳಿ 6.70, ಕೊಡ್ಲಿಪೇಟೆ 0.80, ಕುಶಾಲನಗರ 2.40, ಸುಂಟಿಕೊಪ್ಪ 5.10 ಮಿ.ಮೀ.ಮಳೆಯಾಗಿದೆ.

# ಸಂಗೀತ ಲೋಕಕ್ಕೆ ಜಾನಕಿಯವರ ಕೊಡುಗೆ ಅನನ್ಯ:ಟಿ ಎಸ್ ಶ್ರೀವತ್ಸ

**ಮೈಸೂರು:** ಸಂಗೀತ ಲೋಕಕ್ಕೆ ಎಸ್ ಜಾನಕಿ ಅವರ ಕೊಡುಗೆ ಅನನ್ಯವಾದದ್ದು ಎಂದು ಶಾಸಕ ಟಿಎಸ್ ಶ್ರೀವತ್ಸ ಹೇಳಿದರು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ್ ಶತಮಾನೋತ್ಸವ ಭವನದಲ್ಲಿ ಪಾತಿ ಫೌಂಡೇಶನ್ ವತಿಯಿಂದ ಆಯೋಜಿಸಿದ ಎಸ್ ಜಾನಕಿ ಅವರ ಗಾಯನಕ್ಕೆ ಗಾನಾಭಿಷೇಕ ನಮನ ಕಾರ್ಯಕ್ರಮವನ್ನು ದೀಪಾ ಬೆಳಗಿಸಿ ನಂತರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು

ತೆಲುಗು ಮಾತೃಭಾಷೆಯಾಗಿದ್ದರು ಎಸ್ ಜಾನಕಿ ಅವರು ಕನ್ನಡದಲ್ಲಿ ಅತಿ ಹೆಚ್ಚು ಹಾಡುಗಳನ್ನು ಹಾಡಿ ಕನ್ನಡಿಗರ ಪ್ರೀತಿ ಪಾತ್ರರಾದರು. ಕನ್ನಡ ನಾಡಿನಲ್ಲೆ ನೆಲೆಸಿ , ಮೈಸೂರಿನಲ್ಲಿ ಕೊನೆ ಉಸಿರು ಬಿಟ್ಟರು,




ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು ನಂತರ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ ಮಾತನಾಡಿದರು.

ಯೋಗ ಕ್ಷೇತ್ರದ ಸಾಧನೆಗೈದ ಅನಂತು, ಸಾಹಿತ್ಯ ಕ್ಷೇತ್ರದಿಂದ ಪುಷ್ಪ ಅಯ್ಯಂಗಾರ್, ಹಾಗೂ ಧಾರ್ಮಿಕ ಕ್ಷೇತ್ರದಿಂದ ವೈದೇಹಿ ಅಯ್ಯಂಗಾರ್ ರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ,ಆರ್.ಎಸ್.ಎಸ್. ಮಾ.ವೆಂಕಟ್ ರಾಮ್ ಜಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ವಕೀಲ ಮಧ್ವರಾಜ್, ಪಾತಿ ಫೌಂಡೇಶನ್ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ವಿಪ್ರ ಮುಖಂಡರಾದ ನಂ ಶ್ರೀಕಂಠಕುಮಾರ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಟಿ.ಎಸ್. ಅರುಣ್, ರಾಜಕುಮಾರ್, ಗಾಯಕ ಕೃಷ್ಣಮೂರ್ತಿ, ಬಸವರಾಜ್, ಮಹದೇವ್, ಮಂಜುನಾಥ್, ಪುರುಷೋತ್ತಮ್ ಇನ್ನಿತರರು ಹಾಜರಿದ್ದರು.

## ವಿಶೇಷ ಚೇತನರಿಗೆ ಸಹನೆಯಿಂದ ಕಲಿಸಿ

**ಮೈಸೂರು:** ಅವಧೂತ ದತ್ತ ಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 23ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ ಪ್ರಯುಕ್ತ ಅನೇಕ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮ ಆರಂಭಗೊಂಡಿತು.

ಶ್ರೀ ದತ್ತ ವಿಜಯಾನಂದ ತೀರ್ಥ ಶ್ರೀಗಳ ಸಮ್ಮುಖದಲ್ಲಿ ವಿಶೇಷಚೇತನ ಮಕ್ಕಳ ಕೈನಿಂದಲೇ ಅನಘವ್ರತವನ್ನು ಮಾಡಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಮಾಡಿದ್ದು ವಿಶೇಷವಾಗಿತ್ತು. ನಂತರ ವಿವಿಧ ಶಾಲೆಗಳ ವಿಶೇಷ ಚೇತನ ಮಕ್ಕಳಿಗೆ ಅವಧೂತ ದತ್ತ ಪೀಠದ ವತಿಯಿಂದ ಉಪಯುಕ್ತ ಸಾಧನಾ ಸಲಕರಣೆಗಳನ್ನು ವಿತರಿಸಿ ಮಕ್ಕಳ ಶ್ರೇಯೋಭಿವೃದ್ಧಿಗೆ ಪ್ರಾರ್ಥಿಸಲಾಯಿತು. ಈ ಸಂದರ್ಭದಲ್ಲಿ ವಿಶೇಷ ಮಕ್ಕಳಿಗೆ ಆಶೀರ್ವಚನ ನೀಡಿ ಮಾತನಾಡಿದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಯವರು, ವಿಶೇಷ ಚೇತನ ಮಕ್ಕಳಿಗೆ ತಾಳ್ಮೆ, ಸಹನೆಯಿಂದ ಹೇಳಿಕೊಡಬೇಕು ಆಗ ಅವರು ಶ್ರದ್ಧೆಯಿಂದ ಕಲಿಯುತ್ತಾರೆ ಎಂದು ಸಲಹೆ ನೀಡಿದರು.



# ವಿದ್ಯುತ್ ಸಿಬ್ಬಂದಿಗಳಿಗೆ ರಕ್ಷಣೆ ಕೋರಿ ಚಾಮುಂಡೇಶ್ವರಿಗೆ ಪ್ರಾರ್ಥನೆ

**ಹನೂರು:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಹನೂರು ಉಪವಿಭಾಗ ಕಚೇರಿಯಲ್ಲಿ ಮಂಗಳವಾರ ಚಾಮುಂಡೇಶ್ವರಿ ಜಯಂತಿಯನ್ನು ಭಕ್ತಿ ಮತ್ತು ಶಿಸ್ತಿನಿಂದ ಆಚರಿಸಲಾಯಿತು. ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಈ ಹಬ್ಬವನ್ನು ಕಚೇರಿಯಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ.

ಬೆಳಿಗ್ಗೆ ಕಚೇರಿ ಆವರಣದಲ್ಲಿ ತಾಯಿ ಚಾಮುಂಡೇಶ್ವರಿಯ ಭಾವಚಿತ್ರವನ್ನು ಹೂವು, ಹಣ್ಣು ಹಾಗೂ ದೀಪಗಳಿಂದ ಅಲಂಕರಿಸಲಾಗಿತ್ತು. ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆರ್. ರಂಗಸ್ವಾಮಿ ಅವರು ಪೂಜೆ ನೆರವೇರಿಸಿ ವಿಶೇಷ



ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಂಗಸ್ವಾಮಿ ಅವರು, "ನಾಡದೇವತೆ ತಾಯಿ ಚಾಮುಂಡೇಶ್ವರಿಯು ನಮ್ಮ ಇಲಾಖೆಯ ಎಲ್ಲಾ ಸಿಬ್ಬಂದಿಗಳಿಗೆ ಮತ್ತು ಹಿರಿಯ ಅಧಿಕಾರಿಗಳಿಗೆ ಯಾವುದೇ ರೀತಿಯ ಅನಾಹುತವಾಗದಂತೆ ಕಾಪಾಡಲಿ. ವಿದ್ಯುತ್ ಕೆಲಸದಲ್ಲಿ ತೊಡಗಿರುವ ನಮ್ಮ ಸಿಬ್ಬಂದಿಗಳಿಗೆ ಸುರಕ್ಷತೆ, ಆರೋಗ್ಯ ಮತ್ತು ಮಾನಸಿಕ ನೆಮ್ಮದಿ ನೀಡಲಿ" ಎಂದು ಬೇಡಿಕೊಂಡರು.

ಜೊತೆಗೆ "ಕಾಲಕಾಲಕ್ಕೆ ಉತ್ತಮ ಮಳೆಯಾಗಿ ರೈತರ ಬೆಳೆಗಳು ಚೆನ್ನಾಗಿ ಆಗಲಿ. ರೈತರಿಗೆ ಯಾವುದೇ ವಿದ್ಯುತ್ ಸಮಸ್ಯೆ ಆಗದಂತೆ ನಮ್ಮ ಇಲಾಖೆ ನಿರಂತರವಾಗಿ ಸೇವೆ ಸಲ್ಲಿಸುತ್ತಿದೆ. ತಾಯಿಯ ಆಶೀರ್ವಾದದಿಂದ ನಾವೆಲ್ಲರೂ ಜನರಿಗೆ ಉತ್ತಮ ಸೇವೆ ನೀಡಲು ಶಕ್ತಿ ನೀಡಲಿ" ಎಂದು ಪ್ರಾರ್ಥಿಸಿದರು. ಕಾರ್ಯಕ್ರಮದಲ್ಲಿ ಕಿರಿಯ ಇಂಜಿನಿಯರ್‌ಗಳಾದ ಮಹದೇವಸ್ವಾಮಿ, ಎಸ್. ವೆಂಕಟೇಶಮೂರ್ತಿ, ಅಬ್ದುಲ್ ಕೈಯೂಮ್, ಮಹೇಶ್ ಪಿ, ನವೀನ್, ನಂಜುಂಡ ಸೇರಿದಂತೆ ಕಚೇರಿಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಪೂಜೆಯ ಬಳಿಕ ಆಗಮಿಸಿದ್ದ ಎಲ್ಲಾ ಸಿಬ್ಬಂದಿಗಳಿಗೆ ಪ್ರಸಾದ ವಿತರಿಸಲಾಯಿತು. ದೇವಿಯ ಭಜನೆ ಮತ್ತು ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಅರ್ಥಪೂರ್ಣವಾಗಿ ನೆರವೇರಿತು. ಇಲಾಖೆಯ ಸಿಬ್ಬಂದಿಗಳಲ್ಲಿ ಭಕ್ತಿ ಮತ್ತು ಒಗ್ಗಟ್ಟಿನ ವಾತಾವರಣ ಮೂಡಿತ್ತು.

# ಆ.10ರಂದು ಮಂಡ್ಯದಲ್ಲಿ ಜೈಲ್ ಭರೋ ಚಳವಳಿ

## ಕಾರ್ಪೋರೇಟ್ ನೀತಿ, ಭೂಸ್ವಾಧೀನ ವಿರೋಧಿಸಿ ವಿವಿಧ ಸಂಘಟನೆಗಳ ಪ್ರತಿಭಟನೆ

**ಮಂಡ್ಯ:** ಸಂಯುಕ್ತ ಹೋರಾಟ ಕರ್ನಾಟಕ, ಸಂಯುಕ್ತ ಕಿಸಾನ್ ಮೋರ್ಚಾ, ಜಂಟಿ ಕಾರ್ಮಿಕ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘ ಸೇರಿದಂತೆ ನಾನಾ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಜೈಲ್ ಭರೋ ಚಳವಳಿಯನ್ನು ಆ.10ರಂದು ಬೆಳಗ್ಗೆ 11 ಗಂಟೆಗೆ ನಗರದ ಜೆ.ಸಿ ವೃತ್ತದಲ್ಲಿ ನೆಡಸಲಾಗುವುದು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಎನ್.ಎಲ್.ಭರತ್‌ರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐತಿಹಾಸಿಕ ಕ್ವಿಟ್ ಇಂಡಿಯಾ ಚಳವಳಿಯ ನೆನಪು ಮತ್ತು ಸ್ಫೂರ್ತಿಯಲ್ಲಿ ದೇಶಾದ್ಯಂತ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ 'ಕಾರ್ಪೋರೇಟ್‌ಗಳೇ ದೇಶಬಿಟ್ಟು ತೊಲಗಿ' ಘೋಷಣೆಯಡಿ ಈ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದರು.

ಬಲವಂತ ಹಾಗೂ ಅನ್ಯಾಯದ ಭೂ ಸ್ವಾಧೀನ, ಕಾರ್ಪೋರೇಟ್ ಭೂಕಬಳಿಕೆ ವಿರೋಧಿಸಲಾಗುವುದು. ಕಾರ್ಮಿಕ ವಿರೋಧಿ, ಕನಿಷ್ಠ ಕೂಲಿ ಪರಿಷ್ಕರಣೆ ವಿರೋಧಿಸಿ, 4 ಕಾರ್ಮಿಕ ಸಂಹಿತೆಗಳನ್ನು ವಾಪಸ್ ಪಡೆಯಬೇಕು. ಮನ್‌ರೇಗಾ ಮುಂದುವರೆಸಿ ವರ್ಷಕ್ಕೆ




200ದಿನ, ಪ್ರತಿದಿನ 700 ರೂ.ಕೂಲಿ ನೀಡಬೇಕು. ವಿದ್ಯುತ್ ತಿದ್ದುಪಡಿ, ಬೀಜ ಕಾಯ್ದೆ, ಕೃಷಿ ಮಾರುಕಟ್ಟೆ ಕುರಿತು ರಾಷ್ಟ್ರೀಯ ಧೋರಣಾ ಚೌಕಟ್ಟು ರದ್ದು ಪಡಿಸಲು ಆಗ್ರಹಿಸಲಾಗುವುದು ಎಂದು ಹೇಳಿದರು.

ಸ್ವಾಮಿನಾಥನ್ ವರದಿ ಶಿಫಾರಸ್ಸಿನಂತೆ ರೈತರ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಶಾಸನ, ಎಲ್ಲ ರೈತ–ಕೃಷಿಕೂಲಿಕಾರ ಮಹಿಳೆಯರ ಎಲ್ಲಾ ರೀತಿಯ ಸಾಲಮನ್ನಾ, ಋಣಮುಕ್ತ ಕಾಯ್ದೆ ಜಾರಿ ಮತ್ತು ಶಾಸನ ಬದ್ಧ ಜೀವನಾವಶ್ಯಕ ಕನಿಷ್ಠ ಶಾಸನ, ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿ ಸೇರದಿಂತೆ ನಾನಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗುವುದೆಂದರು.

ಗೋಷ್ಠಿಯಲ್ಲಿ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಅಣ್ಣಯ್ಯ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸಿ.ಕುಮಾರಿ, ಸುಶೀಲ, ಮಹದೇವು, ಚಂದ್ರಶೇಖರ್, ಆನಂದ್, ಕುಮಾರ್ ಇದ್ದರು.

## ಸಿ. ಪುಟ್ಟರಂಗಶೆಟ್ಟಿ ಸಚಿವರಾಗಿ ನೇಮಕ: ಉಪ್ಪಾರ ಸಮಾಜದಿಂದ ಅಭಿನಂದನೆ



**ಕೆ.ಆರ್.ನಗರ:** ಉಪ್ಪಾರ ಸಮಾಜದ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರನ್ನು ಸಚಿವರನ್ನಾಗಿ ಮಾಡಿದ ಮುಖ್ಯಮಂತ್ರಿಗಳು ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಕಾಟ್ನಾಳು ಮಹದೇವ ಅಭಿನಂದನೆ ಸಲ್ಲಿಸಿದ್ದಾರೆ.

ಅವರು ಈ ಕುರಿತು ಪತ್ರಿಕಾ ಹೇಳಿಕೆಯನ್ನು ನೀಡಿ ಕರ್ನಾಟಕ ರಾಜ್ಯ ಉಪ್ಪಾರ ಸಂಘದ ಅಧ್ಯಕ್ಷರು, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಉಪ್ಪಾರ ಸಮಾಜದ ಏಕೈಕ ವಿಧಾನಸಭಾ ಸದಸ್ಯರಾದ ಸಿ.ಪುಟ್ಟರಂಗಶೆಟ್ಟಿಯವರನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಸಚಿವರನ್ನಾಗಿ ಮಾಡುವ ಮೂಲಕ ಉಪ್ಪಾರ ಸಮಾಜಕ್ಕೆ ಆದ್ಯತೆಯನ್ನು ನೀಡಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೆ ಉಪ್ಪಾರ ಸಮಾಜದ ಸಮಸ್ತ ಬಂಧುಗಳ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

# ಗಾಂಧಿ ಸಹಜ ಬೇಸಾಯ ಆಶ್ರಮದಲ್ಲಿ ಮೂರು ದಿನಗಳ ಚಳವಳಿ; ಆ.7ರಂದು ಪಾದಯಾತ್ರೆ

**ಮಂಡ್ಯ:** ರಾಜ್ಯದ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ತುಮಕೂರು ಜಿಲ್ಲೆಯ ದೊಡ್ಡಹೊಸೂರು ಗ್ರಾಮದ ಗಾಂಧಿ ಸಹಜ ಬೇಸಾಯ ಆಶ್ರಮದಲ್ಲಿ ಆ 6, 7 ಮತ್ತು 8ರಂದು ಗಾಂಧ 'ಮಣ್ಣು–ನೀರು ಸತ್ಯಾಗ್ರಹ'ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜೈ ಕರ್ನಾಟಕ ಪರಿಷತ್ತಿನ ರಾಜ್ಯಾಧ್ಯಕ್ಷ ಎಸ್.ನಾರಾಯಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡದಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಡಾಟಾ ಕೇಂದ್ರವಷ್ಟೇ ಅಲ್ಲ. ಪ್ರದೇಶವಾರು ಉದ್ಯೋಗ, ಜೀವನ ಮತ್ತು ಕ್ರೀಡೆಯನ್ನು ಕಸಿದು ಬಹುರಾಷ್ಟ್ರೀಯ ಕಂಪನಿಗಳ ನಗರವನ್ನಾಗಿಸಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸತ್ಯಾಗ್ರಹದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಎಐ ಸಂಶೋಧಕ ದೇವ್ ಜೈನ್, ಎಐಸುರಕ್ಷತಾ ಶಿಬಿರದ ಕಾರ್ಯಕ್ರಮ ಸಂಯೋಜಕ ರೆಮ್ಮೆಲ್ಟ್ ಎಲೆನ್ ಕೃತಕ ಬುದ್ಧಿಮತೆ ತಾಂತ್ರಿಕ ಚರ್ಚೆ




ಮಾಡುವರು. ರೈತ ಮುಂದಿನ ನಡೆದ ಬಗ್ಗೆ ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಕುರುಬೂರು ಶಾಂತಕುಮಾರ್, ಹೊನ್ನೂರು ಪ್ರಕಾಶ್, ಕೃತ ಬುದ್ಧಿಮತ್ತೆ ಮತ್ತು ರಾಜಕೀಯದ ಬಗ್ಗೆ ಜೆಡಿಎಸ್‌ನ ಮಹಿಮಾ ಜೆ.ಎಚ್.ಪಟೇಲ್, ಸಂಶೋಧನಾ ವಿದ್ಯಾರ್ಥಿ ನವೀನ್, ಕೃತಕ ಬುದ್ಧಿಮತೆ ಮತ್ತು ಪರಿಸರ ಸಮಸ್ಯೆಗಳ ಕುರಿತು ಚಲನಚಿತ್ರ ನಿರ್ಮಾಪಕ ಸುರೇಶ್ ಹೆಬ್ಳೀಕರ್, ಶಾಶ್ವತ ನೀರಾವರಿ ಹೋರಾಟಗಾರ ಆಂಜನೇಯ ರೆಡ್ಡಿ, ಜಲ್ ಬಿರಾದಾರಿ ರಾಷ್ಟ್ರೀಯ ಸಂಚಾಲಕ ಸತ್ಯನಾರಾಯಣ, ಕೃತಕ ಬುದ್ಧಿಮತ್ತೆ, ಸಂಸ್ಕೃತಿಕ, ಕಲೆ ಮತ್ತು ಜ್ಞಾನ ಸಂಬಂಧ ಕನ್ನಡ ಸಾಹಿತಿ ಕಾಳೇಗೌಡ ನಾಗವಾರ, ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನದ ಬಸವರಾಜ ಪಾಟೀಲ್ ಚರ್ಚೆ ನಡೆಸಲಿದ್ದಾರೆ. ಕೃಷಿ ತಜ್ಞ ಡಾ.ಎಚ್. ಮಂಜುನಾಥ ಅತಿಥೇಯರಾಗಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಆ.7ರಂದು ಬೆಳಗ್ಗೆ 9ಕ್ಕೆ ಆಶ್ರಮದಿಂದ ತುಮಕೂರು ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಮಾಡಲಾಗುವುದು. ಮಧ್ಯಾಹ್ನ 2 ಗಂಟೆಗೆ ಚರ್ಚೆಯ ನಿರ್ಣಯಗಳನ್ನು ಒಳಗೊಂಡಂತೆ ಮನವಿ ಪತ್ರವನ್ನು ಸರಕಾರಕ್ಕೆ ಸಲ್ಲಿಸಲಾಗುವುದು. ಆ.8ರಂದು ಚರ್ಚೆಯಲ್ಲಿ ಭಾಗವಹಿಸಿದ ಎಲ್ಲ ಸಂಘಟನೆಗಳೊಂದಿಗೆ ಸರಕಾರ ಸ್ಪಂಧನೆ ವಿಚಾರವಾಗಿ ಮುಂದಿನ ನಡೆ ಬಗ್ಗೆ ಸಭೆ ಮಾಡಲಾಗುವುದು ಎಂದು ಹೇಳಿದರು.

ಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ, ಸುಶೀಲಮ್ಮ, ಆನಂದ, ಅಣಯ್ಯ, ಶಿವಪ್ರಸಾದ್ ಇದ್ದರು.

# ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಸ್ಥಳೀಯ ಚುನಾವಣೆ ಗೆಲ್ಲಲು ಸಿದ್ಧರಾಗಿ: ಜನಧ್ವನಿ ವೆಂಕಟೇಶ್



**ಹನೂರು:** ಮುಂದಿನ ದಿನಗಳಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಕಾರ್ಯಕರ್ತರು ಈಗಿನಿಂದಲೇ ಬೂತ್ ಮಟ್ಟದಲ್ಲಿ ಸಂಘಟನಾ ಕಾರ್ಯಕ್ಕೆ ಇಳಿದು ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ಬಿಜೆಪಿ ಒಬಿಸಿ ಜಿಲ್ಲಾಧ್ಯಕ್ಷ ಜನಧ್ವನಿ ಬಿ.ವೆಂಕಟೇಶ್ ಹೇಳಿದರು.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರ ಭವನದಲ್ಲಿ ಮಹದೇಶ್ವರ ಮಂಡಲದ ವತಿಯಿಂದ ಆಯೋಜಿಸಿದ್ದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಕಾರ್ಯಕರ್ತರು ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಾಗಿ ಕೆಲಸ ಮಾಡಬೇಕು. ಪ್ರತಿ ಬೂತ್‌ನಲ್ಲೂ ಸಕ್ರಿಯ ಕಾರ್ಯಕರ್ತರ ತಂಡವನ್ನು ರಚಿಸಿ ಮನೆ–ಮನೆಗೆ ತೆರಳಿ ಪಕ್ಷದ ಸಿದ್ಧಾಂತ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನಪರ ಯೋಜನೆಗಳನ್ನು ಜನರಿಗೆ ತಲುಪಿಸಬೇಕು. ಯುವ ಮೋರ್ಚಾ ಮತ್ತು ಮಹಿಳಾ ಮೋರ್ಚಾವನ್ನು ಹೆಚ್ಚು ಸಕ್ರಿಯಗೊಳಿಸಿ ಯುವಕರು ಹಾಗೂ ಮಹಿಳೆಯರನ್ನು ಪಕ್ಷಕ್ಕೆ ಸೆಳೆಯುವ ಕಾರ್ಯ ಮಾಡಬೇಕು ಎಂದು ಕರೆ ನೀಡಿದರು.

ಮುಂಬರುವಜಿಲ್ಲಾಪಂಚಾಯಿತಿಚುನಾವಣೆಯಲ್ಲಿ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವುದು ನಮ್ಮ ಗುರಿಯಾಗಿದೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಲೋಕಸಭಾ ಚುನಾವಣೆಯವರೆಗೆ ಎಲ್ಲಾ ಹಂತದಲ್ಲೂ ಪಕ್ಷದ ಅಭ್ಯರ್ಥಿಗಳು ಜಯಗಳಿಸುವಂತೆ ಕಾರ್ಯಕರ್ತರು ಗ್ರಾಮ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಸಂಘಟನೆಯನ್ನು ಬಲಪಡಿಸಬೇಕು ಎಂದು ಸೂಚಿಸಿದರು.

ಈಗಾಗಲೇ ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವು ಆಗಸ್ಟ್ 8ರಂದು ಪೂರ್ಣಗೊಳ್ಳಲಿದೆ. ಈ ಪಟ್ಟಿಯೇ ಮುಂದಿನ ಎಲ್ಲಾ ಚುನಾವಣೆಗಳಿಗೆ ಆಧಾರವಾಗಿರುವುದರಿಂದ ಪ್ರತಿಯೊಬ್ಬ ಅರ್ಹ ಮತದಾರರ ಹೆಸರು ಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಯಾರೂ ಮತದಾನದಿಂದ ವಂಚಿತರಾಗಬಾರದು ಎಂದು ತಿಳಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 12 ವರ್ಷಗಳಿಂದ ಭ್ರಷ್ಟಾಚಾರ ರಹಿತ ಆಡಳಿತ ನೀಡಿದ್ದಾರೆ. ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ನಾವೆಲ್ಲರೂ ಶ್ರಮಿಸಬೇಕು. ಹನೂರು ವಿಧಾನಸಭಾ ಕ್ಷೇತ್ರದಲ್ಲೂ ಬಿಜೆಪಿ ಬಾವುಟ ಹಾರಿಸಬೇಕು" ಎಂದು ಅವರು ಕಾರ್ಯಕರ್ತರಲ್ಲಿ ಹುರುಪು ತುಂಬಿದರು. ಸಭೆಯಲ್ಲಿ ಮಲೆ ಮಹದೇಶ್ವರ ಮಂಡಲ ಅಧ್ಯಕ್ಷ ಮುರುಗೇಶ್, ಯುವ ಮೋರ್ಚಾ ಅಧ್ಯಕ್ಷ ಚಿರಂಜೀವಿ, ಮುಖಂಡರಾದ ಪುಟ್ಟಣ್ಣ ಮಾಸ್ಟರ್ ಆರ್ಮುಗ ಮಾದೇಶಯ್ಯ ಶರವಣ ಗ್ಯಾಸ್ ಪ್ರಕಾಶ್ ನಾಗರಾಜು ಮುರುಗ ಕುಟ್ಟಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಹದೇವಪ್ರಸಾದ್ ಸದಾ ಗೋವಿಂದರಾಜು ಶಿವಮಲ್ಲಪ್ಪ ಉಗನಿಯ ಮಹೇಶ್, ರಮೇಶ್, ಪುಟ್ಟಣ್ಣ, ಲೋಕೇಶ್ ಜತ್ತಿ, ಯುವ ಮುಖಂಡ ಭರತ್ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

## ಗುಂಡಿನಲ್ಲೂ ಗುಡುಗಿದ ಹೆಮ್ಮೆ: ಇಶಾ ಸಿಂಗ್



ಡಾ.ಸುಧಾಕರ.ಜಿ.ಲಕ್ಕವಳ್ಳಿ

2026 ರ ವಿಶ್ವ ಶೂಟಿಂಗ್ ಸ್ಪರ್ಧೆ ಮ್ಯೂನಿಚ್‌ನಲ್ಲಿ ಭಾರತದ 21 ವರ್ಷದ ಇಶಾ ಸಿಂಗ್ ಅವರು ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಇತಿಹಾಸ ಸೃಷ್ಟಿಸಿದರು. ಅಂತಿಮ ಸುತ್ತಿನಲ್ಲಿ 43 ಗುರಿಗಳನ್ನು ಹೊಡೆದು ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡು, ಹಿರಿಯ ಮತ್ತು ಕಿರಿಯರ ಎರಡೂ ವಿಶ್ವ ದಾಖಲೆಗಳನ್ನು ಒಂದೇ ಬಾರಿಗೆ ಮುರಿದರು. ದಕ್ಷಿಣ ಕೊರಿಯಾದ ಹಿಂದಿನ 42 ಗುರಿಗಳ ದಾಖಲೆಯನ್ನು ಮೀರಿ, ಆತಿಥೇಯ ಜರ್ಮನಿಯ ಸ್ಪರ್ಧಿಗಳಿಗಿಂತ 5 ಅಂಕಗಳ ಅಂತರದಲ್ಲಿ ಅಗ್ರಸ್ಥಾನ ಪಡೆದರು.

"ಮ್ಯೂನಿಚ್ ನಮಗೆ ಯಾವಾಗಲೂ ವಿಶೇಷ. ಇಲ್ಲಿ ಮೊದಲ ಎಂಟರಲ್ಲಿ ಸ್ಥಾನ ಪಡೆಯುವುದೇ ದೊಡ್ಡ ಸವಾಲು. ಆದರೆ ನಮ್ಮ ಅಭ್ಯಾಸ ಮತ್ತು ಶ್ರದ್ಧೆಯ ಮೇಲೆ ಮಾತ್ರ ಗಮನ ಇಟ್ಟ ಕಾರಣ ಈ ಸಾಧನೆ ಸಾಧ್ಯವಾಯಿತು" ಎಂದು ಇಶಾ ಹೇಳಿದರು. ಈ ಮಾತುಗಳಲ್ಲಿ ಒತ್ತಡವನ್ನು ಗೆದ್ದ ಮಾನಸಿಕ ಬಲ ಎದ್ದು ಕಾಣುತ್ತದೆ.

ಸ್ಫೂರ್ತಿ ಸುಧೆ - 87

ಇದಾದ ಕೆಲವೇ ದಿನಗಳಲ್ಲಿ ಹ್ಯಾಂಗ್‌ಝೌನ ವಿಶ್ವ ಸ್ಪರ್ಧೆಯಲ್ಲೂ 40 ಗುರಿಗಳೊಂದಿಗೆ ಮತ್ತೊಂದು ಚಿನ್ನವನ್ನು ಗೆದ್ದು, ಮನು ಭಾಕರ್ ಅವರೊಂದಿಗೆ ಭಾರತಕ್ಕೆ ಎರಡು ಪದಕಗಳನ್ನು ತಂದುಕೊಟ್ಟರು. ನಾಲ್ಕು ವೈಯಕ್ತಿಕ ವಿಶ್ವ ಪದಕಗಳೊಂದಿಗೆ ಇಶಾ ಭಾರತದ ಶೂಟಿಂಗ್‌ನ ಭರವಸೆಯ ನಕ್ಷತ್ರವಾಗಿ ಬೆಳೆಯುತ್ತಿದ್ದಾರೆ.

ಒತ್ತಡದಲ್ಲೂ ನಡುಗದ ಕೈ, ಗುರಿಯಿಂದ ವಿಚಲಿತರಾಗದ ದೃಷ್ಟಿ. ಇಶಾ ಅವರ ಸಾಧನೆ ಕೇವಲ ಪದಕವಲ್ಲ, ಅದು ಕೋಟಿ ಯುವತಿಯರಿಗೆ ಕನಸು ಕಾಣುವ ಶಕ್ತಿ. ಭಾರತದ ಕ್ರೀಡಾ ಭವಿಷ್ಯಕ್ಕೆ ಇವರು ನೀಡಿದ ಅಮೂಲ್ಯ ಕೊಡುಗೆ. ಜೈ ಹಿಂದ್!




# ಜಾಗತಿಕ ಜನಸಂಖ್ಯೆಯ ಮಹಾವಿಪ್ಲವ!?
# ಕುಸಿಯುತ್ತಿರುವ ಜನನ ಪ್ರಮಾಣ ವರವೇ, ಶಾಪವೇ?



| ರೂಪ ಮಂಜುನಾಥ ಹೊಳೆನರಸೀಪುರ






ಮಾನವನ ಯಶಸ್ಸಿನ ಅಳತೆಗೋಲು ಯಾವಾಗಲೂ 'ಬೆಳವಣಿಗೆ'ಯಲ್ಲೇ ಅಡಗಿದೆ. ಹೆಚ್ಚು ಉತ್ಪಾದನೆ, ಹೆಚ್ಚಿನ ಲಾಭ, ಮತ್ತು ಹೆಚ್ಚು ಜನಸಂಖ್ಯೆ?ಇದೇ ಆಧುನಿಕ ಜಗತ್ತಿನ ಆರ್ಥಿಕ ಸೂತ್ರವಾಗಿತ್ತು. ಆದರೆ ಪ್ರಕೃತಿ ಮತ್ತು ಕಾಲ ಈಗ ಆ ಸೂತ್ರವನ್ನು ಬದಲಾಯಿಸಲು ಹೊರಟಂತಿದೆ. ಇತಿಹಾಸದಲ್ಲೇ ಮೊದಲ ಬಾರಿಗೆ, ಯಾವುದೇ ಯುದ್ಧ ಅಥವಾ ಮಹಾಮಾರಿಯ ಕಾರಣವಿಲ್ಲದೆಯೇ ಜಾಗತಿಕವಾಗಿ ಮಕ್ಕಳ ಜನನ ಪ್ರಮಾಣ ತೀವ್ರವಾಗಿ ಇಳಿಯುತ್ತಿದೆ. ಮಹಿಳಾ ಸಬಲೀಕರಣ, ನಗರೀಕರಣ ಮತ್ತು ಬದಲಾದ ಜೀವನಶೈಲಿಗಳು ಮಾನವನ ಸಂತಾನೋತ್ಪತ್ತಿಯ ವೇಗಕ್ಕೆ ಬ್ರೇಕ್ ಹಾಕಿವೆ. ಸದಾ ವಿಸ್ತರಣೆಯನ್ನೇ ಬಯಸುವ ನಮ್ಮ ಸಮಾಜಕ್ಕೆ, ಈ 'ಸಂಕುಚಿತಗೊಳ್ಳುತ್ತಿರುವ ಜನಸಂಖ್ಯೆ' ಹೊಸ ಸವಾಲುಗಳನ್ನು ತಂದಿಟ್ಟಿದೆ. ಈ ಐತಿಹಾಸಿಕ ಬದಲಾವಣೆಯ ಆಳ-ಅಗಲಗಳನ್ನು ನಾವಿಂದು ಸೂಕ್ಷ್ಮವಾಗಿ ವಿಶ್ಲೇಷಿಸಬೇಕಾಗಿದೆ.

ಕಳೆದ ಕೆಲವು ಶತಮಾನಗಳಿಂದ ಮಾನವ ಇತಿಹಾಸವು ಕೇವಲ ಒಂದು ದಿಕ್ಕಿನಲ್ಲಿ ಮಾತ್ರ ಸಾಗುತ್ತಿತ್ತು?ಅದೇ ಜನಸಂಖ್ಯಾ ಸ್ಫೋಟ. ಆದರೆ, 21ನೇ ಶತಮಾನದ ಈ ದಶಕದಲ್ಲಿ ಜಗತ್ತು ಎಂದೂ ಕಾಣದ ವಿಶಿಷ್ಟ ಮತ್ತು ಐತಿಹಾಸಿಕ ಜನಸಂಖ್ಯಾ ಸ್ಥಿತ್ಯಂತರಕ್ಕೆ (Demographic Shift) ಸಾಕ್ಷಿಯಾಗುತ್ತಿದೆ. ಜಾಗತಿಕವಾಗಿ ತಕ್ಷಣವೇ ಜನಸಂಖ್ಯೆ ಒಮ್ಮೆಲೇ ಕುಸಿಯುತ್ತಿಲ್ಲವಾದರೂ, ಜನಸಂಖ್ಯೆ ಬೆಳೆಯುವ ವೇಗ ಅತ್ಯಂತ ತೀವ್ರವಾಗಿ ನಿಧಾನಗೊಳ್ಳುತ್ತಿದೆ. ಸರಳವಾಗಿ ಹೇಳಬೇಕೆಂದರೆ, ಜಗತ್ತಿನಲ್ಲಿ ಮಕ್ಕಳ ಜನನ ಪ್ರಮಾಣವು ದಾಖಲೆ ಮಟ್ಟದಲ್ಲಿ ಕುಸಿಯುತ್ತಿದೆ.

ವಿಶ್ವಸಂಸ್ಥೆಯ (ಗಒ) ಇತ್ತೀಚಿನ ವರದಿಗಳ ಪ್ರಕಾರ, ಜಗತ್ತಿನ ಜನಸಂಖ್ಯೆಯು 2080ರ ದಶಕದ ಮಧ್ಯಭಾಗದಲ್ಲಿ ಸುಮಾರು 10.3 ಬಿಲಿಯನ್ (1,030 ಕೋಟಿ) ತಲುಪಿ ಗರಿಷ್ಠ ಮಟ್ಟವನ್ನು (Peak) ಮುಟ್ಟಲಿದೆ. ಆ ಬಳಿಕ ಜಾಗತಿಕ ಜನಸಂಖ್ಯೆಯು ಇಳಿಕೆಯ ಹಾದಿ ಹಿಡಿಯಲಿದೆ ಎಂದು ಅಂದಾಜಿಸಲಾಗಿದೆ. ಈಗಾಗಲೇ ಜಗತ್ತಿನ ಪ್ರತಿ ನಾಲ್ಕರಲ್ಲಿ ಒಬ್ಬ ವ್ಯಕ್ತಿ ಜನಸಂಖ್ಯೆ ಇಳಿಮುಖವಾಗುತ್ತಿರುವ ದೇಶದಲ್ಲಿ ವಾಸಿಸುತ್ತಿದ್ದಾನೆ.

**ಅಂಕಿ-ಅಂಶಗಳು ಹೇಳುವ ಸತ್ಯವೇನು?**

ಯಾವುದೇ ಒಂದು ದೇಶದ ಜನಸಂಖ್ಯೆಯು ಇದ್ದಷ್ಟೇ ಸ್ಥಿರವಾಗಿ ಇರಬೇಕಾದರೆ ಅಲ್ಲಿನ 'ಒಟ್ಟು ಜನನ ದರ' (Total Fertility Rate - TFR) ಕನಿಷ್ಠ {2.1} ಇರಬೇಕು. ಅಂದರೆ ಸರಾಸರಿ ಒಬ್ಬ ಮಹಿಳೆ ತನ್ನ ಜೀವಿತಾವಧಿಯಲ್ಲಿ 2.1 ಮಕ್ಕಳಿಗೆ ಜನ್ಮ ನೀಡಬೇಕು. ಇದನ್ನು 'ಬದಲಿ ದರ' (Replacement Level) ಎನ್ನಲಾಗುತ್ತದೆ. ಆದರೆ ಇಂದಿನ ಜಾಗತಿಕ ಚಿತ್ರಣವೇ ಬೇರೆಯಾಗಿದೆ:

**ಕುಸಿಯುತ್ತಿರುವ ಜಾಗತಿಕ ದರ:** 1960ರ ದಶಕದಲ್ಲಿ ಜಾಗತಿಕ ಜನನ ದರ ಸರಾಸರಿ 5 ಆಗಿತ್ತು. 2024-2026ರ ಹೊತ್ತಿಗೆ ಇದು ಭೀಕರವಾಗಿ ಕುಸಿದು 2.25 ಕ್ಕೆ ತಲುಪಿದೆ. 2050ರ ವೇಳೆಗೆ ಇದು {2.1} ಕ್ಕಿಂತ ಕೆಳಗೆ ಕುಸಿಯುವುದು ನಿಶ್ಚಿತವಾಗಿದೆ.

**ನೆಲಕಚ್ಚಿದ ದರಗಳು:** ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾದಲ್ಲಿ ಜನನ ದರ ಕೇವಲ 1.02 ಕ್ಕೆ ಇಳಿದಿದೆ. ಭಾರತದಲ್ಲೂ ಸಹ ಇದು ಬದಲಿ ದರಕ್ಕಿಂತ ಕೆಳಗೆ ಅಂದರೆ 1.94 ಕ್ಕೆ ತಲುಪಿದೆ. ಅಮೆರಿಕ (1.62), ಬ್ರೆಜಿಲ್ (1.60) ಹಾಗೂ ಜಪಾನ್, ದಕ್ಷಿಣ ಕೊರಿಯಾದಂತಹ ದೇಶಗಳಲ್ಲಿ ಜನಸಂಖ್ಯೆ ಈಗಾಗಲೇ ತೀವ್ರವಾಗಿ ಇಳಿಮುಖವಾಗತಗಿದೆ.

ಜಗತ್ತಿನ ಶೇ. 71 ಕ್ಕಿಂತ ಹೆಚ್ಚು ಜನಸಂಖ್ಯೆಯು ಬದಲಿ ದರಕ್ಕಿಂತ {<2.1}ಕಡಿಮೆ ಇರುವ ದೇಶಗಳಲ್ಲೇ ಬದುಕುತ್ತಿದೆ. ಪ್ರಸ್ತುತ ಆಫ್ರಿಕಾದ ಕೆಲವು ಭಾಗಗಳನ್ನು ಹೊರತುಪಡಿಸಿದರೆ ಜಗತ್ತಿನಾದ್ಯಂತ ತೊಟ್ಟಿಲು ತೂಗುವ ಸದ್ದು ಗಣನೀಯವಾಗಿ ಕ್ಷೀಣಿಸುತ್ತಿದೆ.

**ಜನನ ಪ್ರಮಾಣ ಕುಸಿಯಲು ಪ್ರಮುಖ ಕಾರಣಗಳೇನು?**

ಈ ಜನಸಂಖ್ಯಾ ಇಳಿತಕ್ಕೆ ಯಾವುದೇ ನೈಸರ್ಗಿಕ ವಿಕೋಪ ಕಾರಣವಲ್ಲ, ಬದಲಿಗೆ ಇದು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ಬೈ-ಪ್ರಾಡಕ್ಟ್ (ಉಪಉತ್ಪನ್ನ) ಎನ್ನಬಹುದು:

1. ಮಹಿಳಾ ಶಿಕ್ಷಣ ಮತ್ತು ಸಬಲೀಕರಣ: ಮಹಿಳೆಯರಲ್ಲಿ ಶಿಕ್ಷಣದ ಮಟ್ಟ ಹೆಚ್ಚಿ, ಅವರು ವೃತ್ತಿಪರರಾಗಿ ಆರ್ಥಿಕ ಸ್ವಾತಂತ್ರ್ಯ ಪಡೆಯುತ್ತಿರುವುದರಿಂದ ತಡವಾಗಿ ವಿವಾಹವಾಗುವುದು ಅಥವಾ ಮಕ್ಕಳ ಹೆರುವಿಕೆಯನ್ನು ಮುಂದೂಡುವುದು ಸಾಮಾನ್ಯವಾಗಿದೆ.
2. ನಗರೀಕರಣ ಮತ್ತು ಜೀವನ ವೆಚ್ಚ: ನಗರಗಳಲ್ಲಿ ವಸತಿ, ಮಕ್ಕಳ ಶಿಕ್ಷಣ ಮತ್ತು ಪಾಲನೆಯ ವೆಚ್ಚ ಗಗನಕ್ಕೇರಿದೆ. "ಒಂದೇ ಮಗು, ಚೊಕ್ಕ ಸಂಸಾರ" ಎಂಬ ಮನೋಭಾವನೆ ಮಧ್ಯಮ ವರ್ಗದಲ್ಲಿ ಸಾರ್ವತ್ರಿಕವಾಗಿದೆ.
3. ಕುಟುಂಬ ಯೋಜನೆಯ ಲಭ್ಯತೆ: ಆಧುನಿಕ ಗರ್ಭನಿರೋಧಕ ವಿಧಾನಗಳು ಮತ್ತು ಕುಟುಂಬ ಯೋಜನೆಯ ಅರಿವು ಜಗತ್ತಿನಾದ್ಯಂತ ವ್ಯಾಪಕವಾಗಿ ವಿಸ್ತರಿಸಿದೆ.
4. ಬದಲಾದ ಸಾಮಾಜಿಕ ಚಿಂತನೆ: ಇಂದಿನ ಯುವ ಪೀಳಿಗೆಗೆ ಮದುವೆ ಮತ್ತು ಮಕ್ಕಳು ಜೀವನದ ಏಕೈಕ ಗುರಿಯಾಗಿ ಉಳಿದಿಲ್ಲ. ತಮ್ಮ ವೈಯಕ್ತಿಕ ಸ್ವಾತಂತ್ರ್ಯ ಮತ್ತು ವೃತ್ತಿ ಬದುಕಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ.

ಬದಲಾದ ಕೌಟುಂಬಿಕ ವ್ಯವಸ್ಥೆ ಕೂಡಾ ಮತ್ತೊಂದು ಕಾರಣ. ಎಂಟ್ಹತ್ತು ಮಕ್ಕಳನ್ನು ಹಡೆದು, ಸಾಕಿ-ಸಲಹಿ ದೊಡ್ಡವರನ್ನು ಮಾಡುತ್ತಿದ್ದ ಕಾಲದಿಂದ, ಇವತ್ತು ಒಂದೇ ಮಗುವನ್ನು ಹಡೆದು,ಸಾಕುವುದು ಬೆಟ್ಟ ಹೊತ್ತಷ್ಟು ಭಾರ ಎನ್ನುವ ಸ್ಥಿತಿಗೆ ತಲುಪಿರುವುದರ ಹಿಂದೆ ಇಡೀ ಸಮಾಜದ ಚಿತ್ರಣವೇ ಬದಲಾಗಿದೆ.

ಅವಿಭಕ್ತ ಕುಟುಂಬಗಳ ಕಣ್ಮರೆ: ಮೊದಲೆಲ್ಲಾ ಅಜ್ಜಿ-ತಾತಾ, ದೊಡ್ಡಪ್ಪ-ದೊಡ್ಡಮ್ಮ, ಅತ್ತೆ-ಮಾವ ಎಲ್ಲರೂ ಜೊತೆಗೇ ಇರುತ್ತಿದ್ದರು. ಮಗುವನ್ನು ಎತ್ತಿ ಆಡಿಸಲು, ಪಾಲನೆ ಮಾಡಲು ಹತ್ತಾರು ಕೈಗಳಿರುತ್ತಿದ್ದವು. ಹಾಗಾಗಿ ಎಂಟ್ಹತ್ತು ಮಕ್ಕಳಿದ್ದರೂ ತಾಯಿಗೆ ಒಂಟಿತನ ಅಥವಾ ಅತಿಯಾದ ಹೊರೆ ಅನಿಸುತ್ತಿರಲಿಲ್ಲ. ಆದರೆ ಇಂದಿನ ನ್ಯೂಕ್ಲಿಯರ್ (ವಿಭಕ್ತ) ಕುಟುಂಬಗಳಲ್ಲಿ ಮಗುವಿನ ಸಂಪೂರ್ಣ ಜವಾಬ್ದಾರಿ ಕೇವಲ ತಂದೆ-ತಾಯಿಯ ಮೇಲಿರುತ್ತದೆ.

ವೆಚ್ಚದಾಯಕ ಜೀವನಶೈಲಿ ಮತ್ತು ಶಿಕ್ಷಣ: ಅಂದಿನ ಕಾಲದಲ್ಲಿ ಮಕ್ಕಳ ಓದು ಸರಳವಾಗಿತ್ತು, ಆಟವಾಡಲು ಪ್ರಕೃತಿಯಿತ್ತು. ಆದರೆ ಇಂದು ಮಗು ಹುಟ್ಟುವ ಮುನ್ನವೇ ಆಸ್ಪತ್ರೆಯ ಖರ್ಚಿನಿಂದ ಹಿಡಿದು, ಮುಂದೆ ಪ್ರಿ-ಸ್ಕೂಲ್ ಡೊನೇಷನ್, ಕೋಚಿಂಗ್ ಕ್ಲಾಸ್‌ಗಳವರೆಗೆ ಎಲ್ಲವೂ ವ್ಯಾಪಾರವಾಗಿಬಿಟ್ಟಿದೆ. ಒಂದು ಮಗುವಿಗೆ ಗುಣಮಟ್ಟದ ಶಿಕ್ಷಣ ಮತ್ತು ಸೌಲಭ್ಯ ಕೊಡಿಸುವುದರಲ್ಲೇ ಪೋಷಕರ ಸುಸ್ತಾಗಿ ಹೋಗುತ್ತಿದೆ.ಒಂದು ಕೂಸನ್ನು ಸಾಕಲು ಎರಡು ಜೀವಗಳು ದುಡಿಯಬೇಕಾದ ಅನಿವಾರ್ಯತೆಯೂ ಬಂದಿರುವುದರಿಂದ ಎರಡನೆಯ ಮಗುವಿನ ಚಿಂತೆ ಬರುವುದು ಅಪರೂಪವೇ ಆಗಿಹೋಗಿದೆ.

**ದುಡಿಯುವ ದಂಪತಿಗಳು:** ಇಂದು ಪತಿ-ಪತ್ನಿ ಇಬ್ಬರೂ ಕೆಲಸಕ್ಕೆ ಹೋಗುವುದು ಅನಿವಾರ್ಯವಾಗಿದೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಕಚೇರಿ ಕೆಲಸ ಮುಗಿಸಿ ಬಂದು, ಮನೆಗೆಲಸದ ಜೊತೆಗೆ ಮಗುವಿನ ಹೋಮ್‌ವರ್ಕ್, ಅವರ ಅಗತ್ಯಗಳನ್ನು ನೋಡಿಕೊಳ್ಳುವಷ್ಟರಲ್ಲಿ ದಂಪತಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ದಣಿದು ಹೋಗುತ್ತಿದ್ದಾರೆ.ಹಾಗಾಗಿಯೇ ಇಂದಿನ ತಲೆಮಾರು "ಒಂದೇ ಮಗು ಸಾಕು, ಅದನ್ನೇ ಚೆನ್ನಾಗಿ ಬೆಳೆಸೋಣ" ಎಂಬ ತೀರ್ಮಾನಕ್ಕೆ ಬರುತ್ತಿದೆ.

**ಇದು ಒಳ್ಳೆಯ ಸೂಚನೆಯೇ ಅಥವಾ ಆತಂಕಕಾರಿಯೇ?**

ಈ ವಿದ್ಯಮಾನವು ಏಕಕಾಲದಲ್ಲಿ ಪರಿಸರಕ್ಕೆ 'ವರ' ಹಾಗೂ ಆರ್ಥಿಕತೆಗೆ 'ಶಾಪ'ವಾಗಿ ಪರಿಣಮಿಸುವ ದ್ವಂದ್ವವನ್ನು ಹೊಂದಿದೆ.

**ಒಳ್ಳೆಯ ಮುಖ (ವರ):** ಪರಿಸರಕ್ಕೆ ಆಸರೆ

ಕಳೆದ ಒಂದು ಶತಮಾನದಿಂದ ಭೂಮಿಯ ಸಂಪನ್ಮೂಲಗಳನ್ನು ಮಿತಿಮೀರಿ ಬಳಸಲಾಗುತ್ತಿತ್ತು. ಜನಸಂಖ್ಯೆ ಕಡಿಮೆಯಾಗುವುದರಿಂದ ಪ್ರಕೃತಿಯ ಮೇಲಿನ ಒತ್ತಡ ಕಡಿಮೆಯಾಗಲಿದೆ.

ಇಂಗಾಲದ ಹೊರಸೂಸುವಿಕೆ (Carbon Footprint) ಕಡಿಮೆಯಾಗಿ ಜಾಗತಿಕ ತಾಪಮಾನ ನಿಯಂತ್ರಣಕ್ಕೆ ಬರಬಹುದು.

ನೀರು, ಆಹಾರ ಮತ್ತು ಭೂಮಿಯಂತಹ ಸೀಮಿತ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಹಕ್ಕಿಗಾಗಿ ನಡೆಯುವ ಸಂಘರ್ಷಗಳು ತಪ್ಪಬಹುದು.

**ಕಷ್ಟದ ಮುಖ (ಆತಂಕ):** ಆರ್ಥಿಕತೆಯ ಮುಪ್ಪಾಗುವಿಕೆ

ಜನಸಂಖ್ಯೆ ಕಡಿಮೆಯಾದಂತೆಲ್ಲಾ ದೇಶದಲ್ಲಿ ದುಡಿಯುವ ಯುವಕರ ಸಂಖ್ಯೆ ಕಡಿಮೆಯಾಗಿ, ವೃದ್ಧರ ಸಂಖ್ಯೆ ಹೆಚ್ಚಾಗುವ ಆತಂಕ ಈಗಾಗಲೇ ಸಮಾಜದಲ್ಲಿ ಕಾಣತೊಡಗಿದೆ.

ದುಡಿಯುವ ಕೈಗಳ ಕೊರತೆ: ಕಾರ್ಖಾನೆ, ತಂತ್ರಜ್ಞಾನ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಜನ ಸಿಗದೆ ಉತ್ಪಾದನೆ ಕುಂಠಿತಗೊಳ್ಳಬಹುದು.

ಪಿಂಚಣಿ ಮತ್ತು ಆರೋಗ್ಯ ವ್ಯವಸ್ಥೆಯ ಮೇಲಿನ ಹೊರೆ: ತೆರಿಗೆ ಪಾವತಿಸುವ ಯುವ ಪೀಳಿಗೆಯ ಸಂಖೆ ಇಳಿಮುಖವಾಗಿ , ಸರ್ಕಾರದ ಸೌಲಭ್ಯ ಆಶಿಸುವ ಹಿರಿಯ ನಾಗರಿಕರ ಸಂಖ್ಯೆ ದೊಡ್ಡದಾದಾಗ ದೇಶದ ಆರ್ಥಿಕ ವ್ಯವಸ್ಥೆ ಕುಸಿಯುವ ಅಪಾಯವಿರುತ್ತದೆ. ಜಪಾನ್ ಈಗಾಗಲೇ ಈ ಸಮಸ್ಯೆಯನ್ನು ಎದುರಿಸುತ್ತಿದೆ.

ಜನಸಂಖ್ಯೆ ಕಡಿಮೆಯಿದ್ದಾಗ ಸಿಗುವ ನೆಮ್ಮದಿ ಮತ್ತು ಜನಸಂಖ್ಯೆ ಹೆಚ್ಚಿದ್ದಾಗ ಸಿಗುವ ಸಾಂಘಿಕ ಶಕ್ತಿ?ಇವೆರಡನ್ನೂ ತಕ್ಕಡಿಯ ಎರಡು ತಟ್ಟೆಗಳಂತೆ ಸಮತೋಲನದಲ್ಲಿ ವಿಶ್ಲೇಷಿಸಬಹುದು.

ಕಡಿಮೆ ಜನಸಂಖ್ಯೆ ಇದ್ದಾಗಿನ ಅನುಕೂಲಗಳು (ವರದಾನಗಳು)

ಕಡಿಮೆ ಜನಸಂಖ್ಯೆಯು ಮುಖ್ಯವಾಗಿ ವೈಯಕ್ತಿಕ ಜೀವನದ ಗುಣಮಟ್ಟ ಮತ್ತು ಪರಿಸರದ ಸುಸ್ಥಿರತೆಗೆ ಪೂರಕವಾಗಿರುತ್ತದೆ.

ಸಂಪನ್ಮೂಲಗಳ ಸಮೃದ್ಧಿ ಮತ್ತು ಹಂಚಿಕೆ: ಜನಸಂಖ್ಯೆ ಕಡಿಮೆಯಿದ್ದಾಗ ದೇಶದ ನೈಸರ್ಗಿಕ ಸಂಪನ್ಮೂಲಗಳಾದ ನೀರು, ಭೂಮಿ ಮತ್ತು ಅರಣ್ಯದ ಮೇಲಿನ ಒತ್ತಡ ಕಡಿಮೆಯಿರುತ್ತದೆ. ಪ್ರತಿಯೊಬ್ಬರಿಗೂ ಶುದ್ಧ ಗಾಳಿ, ನೀರು ಮತ್ತು ಉತ್ತಮ ಆಹಾರ ಸುಲಭವಾಗಿ ಸಿಗುತ್ತದೆ.

**ಉನ್ನತ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ:** ಶಾಲೆ, ಕಾಲೇಜು ಹಾಗೂ ಆಸ್ಪತ್ರೆಗಳಲ್ಲಿ ಜನದಟ್ಟಣೆ ಇರುವುದಿಲ್ಲ. ಸರ್ಕಾರ ಮತ್ತು ಪೋಷಕರು ಪ್ರತಿಯೊಂದು ಮಗುವಿನ ಮೇಲೂ ವೈಯಕ್ತಿಕ ಗಮನಹರಿಸಿ, ಜಾಗತಿಕ ಮಟ್ಟದ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತದೆ. (ಉದಾಹರಣೆಗೆ: ಸ್ಕ್ಯಾಂಡಿನೇವಿಯನ್ ದೇಶಗಳಾದ ನಾರ್ವೆ, ಫಿನ್ಲೆಂಡ್ ಮುಂತಾದವು).

**ಉದ್ಯೋಗ ಮಾರುಕಟ್ಟೆಯಲ್ಲಿ ಬೇಡಿಕೆ:** ದುಡಿಯುವ ಕೈಗಳ ಸಂಖ್ಯೆ ಮಿತಿಯಲ್ಲಿದ್ದಾಗ, ಮಾನವ ಸಂಪನ್ಮೂಲಕ್ಕೆ ಮೌಲ್ಯ ಹೆಚ್ಚಿರುತ್ತದೆ. ನಿರುದ್ಯೋಗ ಸಮಸ್ಯೆ ತಾನಾಗಿಯೇ ಕಡಿಮೆಯಾಗಿ, ಉದ್ಯೋಗಿಗಳಿಗೆ ಉತ್ತಮ ವೇತನ ಮತ್ತು ಸೌಲಭ್ಯಗಳು ಸಿಗುತ್ತವೆ.

ಸ್ವಚ್ಛ ಮತ್ತು ನೆಮ್ಮದಿಯ ಜೀವನ: ನಗರಗಳಲ್ಲಿ ಟ್ರಾಫಿಕ್ ಕಿರಿಕಿರಿ, ವಸತಿ ಕೊರತೆ, ಮತ್ತು ಮಾಲಿನ್ಯ ನಿಯಂತ್ರಣದಲ್ಲಿರುತ್ತದೆ. ಅಪರಾಧಗಳ ಪ್ರಮಾಣ ಕಡಿಮೆಯಾಗಿ ಸಮಾಜದಲ್ಲಿ ನೆಮ್ಮದಿಯ ವಾತಾವರಣವಿರುತ್ತದೆ.

ಹೆಚ್ಚು ಜನಸಂಖ್ಯೆ ಇದ್ದಾಗಿನ ಅನುಕೂಲಗಳು (ಶಕ್ತಿಗಳು)

ಹೆಚ್ಚು ಜನಸಂಖ್ಯೆಯು ಮುಖ್ಯವಾಗಿ ದೇಶವೊಂದರ ಆರ್ಥಿಕ ಬೆಳವಣಿಗೆ ಮತ್ತು ಜಾಗತಿಕ ಪ್ರಭಾವಕ್ಕೆ ಇಂಧನವಿದ್ದಂತೆ.

ಬೃಹತ್ ಮಾರುಕಟ್ಟೆ (Market Size): ಜನಸಂಖ್ಯೆ ಹೆಚ್ಚಿದ್ದಷ್ಟೂ ಗ್ರಾಹಕರ ಸಂಖ್ಯೆ ದೊಡ್ಡದಿರುತ್ತದೆ. ಮೊಬೈಲ್, ಕಾರು, ಬಟ್ಟೆ, ಆಹಾರ ಧಾನ್ಯಗಳಿಂದ ಹಿಡಿದು ಪ್ರತಿಯೊಂದು ವಸ್ತುವಿಗೂ ದೇಶದ ಒಳಗೇ ಬೃಹತ್ ಮಾರುಕಟ್ಟೆ ಸೃಷ್ಟಿಯಾಗುತ್ತದೆ. ಇದು ಉದ್ಯಮಗಳು ಬೆಳೆಯಲು ಮತ್ತು ವಿದೇಶಿ ಹೂಡಿಕೆ ಆಕರ್ಷಿಸಲು ನೆರವಾಗುತ್ತದೆ (ಭಾರತ ಇದಕ್ಕೆ ಪ್ರಸ್ತುತ ಉತ್ತಮ ಉದಾಹರಣೆ).

ಯುವ ದುಡಿಯುವ ಶಕ್ತಿ (Demographic Dividend):ದೇಶದಲ್ಲಿ ಯುವಕರ ಸಂಖ್ಯೆ ಹೆಚ್ಚಿದ್ದಾಗ ಉತ್ಪಾದನಾ ಸಾಮರ್ಥ್ಯ ಅಪಾರವಾಗಿರುತ್ತದೆ. ಕೃಷಿ, ತಂತ್ರಜ್ಞಾನ, ಕರಕುಶಲ ಕಲೆ ಹಾಗೂ ರಕ್ಷಣಾ ಕ್ಷೇತ್ರಕ್ಕೆ ಬೇಕಾದಷ್ಟು ಮಾನವ ಶಕ್ತಿ ಲಭ್ಯವಿರುತ್ತದೆ. ನಾವೀನ್ಯತೆ (Innovation) ಮತ್ತು ನವೋದ್ಯಮಗಳು (Startups) ವೇಗವಾಗಿ ಬೆಳೆಯುತ್ತವೆ.

**ವಿಶ್ವಮಟ್ಟದಲ್ಲಿ ರಾಜತಾಂತ್ರಿಕ ತೂಕ:** ಹೆಚ್ಚು ಜನಸಂಖ್ಯೆ ಮತ್ತು ಬಲವಾದ ಆರ್ಥಿಕತೆ ಹೊಂದಿರುವ ದೇಶಗಳನ್ನು ಜಾಗತಿಕ ವೇದಿಕೆಗಳಲ್ಲಿ (ವಿಶ್ವಸಂಸ್ಥೆಯಂತಹ ಸಂಸ್ಥೆಗಳಲ್ಲಿ) ಕಡೆಗಣಿಸಲು ಸಾಧ್ಯವಿಲ್ಲ. ಅಂತಹ ದೇಶಗಳ ನಿರ್ಧಾರಗಳು ಜಾಗತಿಕ ಭೌಗೋಳಿಕ ರಾಜಕೀಯವನ್ನು (Geopolitics) ನಿರ್ಧರಿಸುತ್ತವೆ.

ಸಾಮಾಜಿಕ ಸುರಕ್ಷತೆ ಮತ್ತು ತೆರಿಗೆ ಆದಾಯ: ದುಡಿಯುವ ಯುವ ಪೀಳಿಗೆ ಹೆಚ್ಚಿದ್ದಾಗ ಸರ್ಕಾರಕ್ಕೆ ಬರುವ ತೆರಿಗೆ ಆದಾಯ ದೊಡ್ಡದಾಗಿರುತ್ತದೆ. ಈ ಹಣದಿಂದ ದೇಶದ ಮೂಲಸೌಕರ್ಯಗಳನ್ನು (ರಸ್ತೆ, ರೈಲು ಇತ್ಯಾದಿ) ಅಭಿವೃದ್ಧಿಪಡಿಸಲು ಮತ್ತು ಹಿರಿಯ ನಾಗರಿಕರಿಗೆ ಪಿಂಚಣಿ, ಸಾಮಾಜಿಕ ಭದ್ರತೆ ನೀಡಲು ಸುಲಭವಾಗುತ್ತದೆ.

"ಕಡಿಮೆ ಜನಸಂಖ್ಯೆಯು 'ವೈಯಕ್ತಿಕ ಸಮೃದ್ಧಿ'ಯನ್ನು ನೀಡಿದರೆ, ಹೆಚ್ಚು ಜನಸಂಖ್ಯೆಯು 'ಸಾಮೂಹಿಕ ಶಕ್ತಿ ಯನ್ನು ನೀಡುತ್ತದೆ. ಆದರೆ ಇವೆರಡರ ನಡುವಿನ ಸಮತೋಲನ ತಪ್ಪಿದಾಗಷ್ಟೇ ಸಮಸ್ಯೆಗಳು ಆರಂಭವಾಗುತ್ತವೆ."

ಒಟ್ಟಾರೆಯಾಗಿ ಹೇಳುವುದಾದರೆ, ಜನಸಂಖ್ಯೆ ಕಡಿಮೆಯಾಗುತ್ತಿರುವುದು ಕೇವಲ ಒಂದು 'ಒಳ್ಳೆಯ' ಅಥವಾ 'ಕೆಟ್ಟ' ಸುದ್ದಿಯಲ್ಲ. ಇದು ಜಗತ್ತು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯ ಸತ್ಯ. ಜನಸಂಖ್ಯೆಯ 'ಬೆಳವಣಿಗೆಯೇ ಪ್ರಗತಿ' ಎಂಬ ಹಳೇ ಆರ್ಥಿಕ ಸೂತ್ರಗಳನ್ನು ಬದಿಗಿಟ್ಟು, ಕೃತಕ ಬುದ್ಧಿಮತ್ತೆ (ಂಐ) ಮತ್ತು ರೊಬೊಟಿಕ್ಸ್‌ನಂತಹ ತಂತ್ರಜ್ಞಾನಗಳ ನೆರವಿನಿಂದ ಕಡಿಮೆ ಮಾನವ ಸಂಪನ್ಮೂಲದಲ್ಲೇ ಸುಸ್ಥಿರ ಬದುಕನ್ನು ರೂಪಿಸಿಕೊಳ್ಳುವುದನ್ನು ಜಗತ್ತು ಕಲಿಯಬೇಕಿದೆ. ತೊಟ್ಟಿಲುಗಳ ತೂಗುವಿಕೆ ಕಡಿಮೆ ಆಗುತ್ತಿರುವ ಈ ಕಾಲಘಟ್ಟದಲ್ಲಿ, ಇಡೀ ಮಾನವಕುಲವು ಗುಣಮಟ್ಟದ ಬದುಕಿನತ್ತ ಹೊಸ ಹೆಜ್ಜೆ ಇಡಬೇಕಾದ ಜವಾಬ್ದಾರಿ ಇದೆ.

**ವಂದನೆಗಳು**

---

# ಮಳೆ ಎಂದರೆ ನೂರು ನೆನಪುಗಳ ತೇರು



| ಪುಷ್ಪ ಪ್ರಸಾದ್



ಒಮ್ಮೆಲೇ ಬಂದೆರಗಿದ ಸಿಡಿಲು, ಭಾರಿ ಶಬ್ದದ ಗುಡುಗು, ಮಿಂಚಿ ಹೋದ ಮಿ0ಚು. ಇವೆಲ್ಲ ಮಳೆ ಬರುವ ಪೀಠಿಕೆಯಷ್ಟೆ. ಮತ್ತೆ ಇದ್ಯಾವುದೇ ತಾಳ ಮೇಳಗಳಿಲ್ಲದೆ, ಅ0ಜಿಕೆ ಅಳುಕಿಲ್ಲದೆ ದಿನವಿಡೀ ಸುರಿಯುತ್ತಲೇ ಇರುತ್ತದೆ. ಮಳೆ ಬರೇ ನೀರ ಗೆರೆಯಲ್ಲವಿದು, ಕೂಡಿಟ್ಟ ಬಾನಿನ ಭಾವದ ಸೆಲೆ, ಬಾನ ಸ0ಗೀತ ಸುಧೆ ಮಳೆಯಾಗಿ ಈ ಭುವಿಯಲ್ಲಿ ಹಾಡುತ್ತಿದೆ. ಆಹಾ......ಎ0ಥ ಚೆ0ದದ ಆಲಾಪವಿದು. ಮಳೆಯ ಆಲಾಪ ಎಂದರೆ ಮಳೆಹನಿಗಳ ಸದ್ದು, ತಂಪಾದ ಗಾಳಿ ಮತ್ತು ಮೋಡ ಕವಿದ ವಾತಾವರಣದಿಂದ ಮನಸ್ಸಿನಲ್ಲಿ ಮೂಡುವ ಸುಂದರ ಭಾವನೆ. ಇದು ಪ್ರಕೃತಿಯ ಸಂಗೀತದಂತೆ ನಮ್ಮನ್ನು ತಲ್ಲೀನಗೊಳಿಸುತ್ತದೆಮಳೆ ಶುರುವಿನಲ್ಲೊಂದು ತರಹ, ನಿಲ್ಲುವಾಗ ಮತ್ತೊ0ದು, ಬಿರುಸಾಗಿ ಸುರಿಯುವಾಗ ಇನ್ನೊ0ದು, ಮಳೆ ಪೂರ್ತಿ ನಿ0ತಾಗ ಉರುಳುವ ಟಪ್ ಟಪ್ ಹನಿಯ ರಾಗವೇ ಮಗದೊ0ದು ತರಹ. ಇದರ ಮಧುರ ಆಲಾಪಕ್ಕೆ, ನಿನಾದಕ್ಕೆ ತಲೆದೂಗದವರು ಯಾರಿದ್ದಾರೆ? ಹನಿಗಳ ಸು0ದರತೆಗೆ, ಮಾರ್ಧವತೆಗೆ ಮರುಳಾಗದ ನಿರ್ಭಾವುಕ ಮನುಜರು ಯಾರಿದ್ದಾರೆ?ಮಳೆಯ ಕುರಿತು ಕವಿತೆಗಳ ಬರೆಯದ ಕವಿಗಳಾರು ಇದ್ದಾರೆ? ಬರಡು ನೆಲವೇ ಹಸಿರಾಗಿ ಮುಗುಳು ನಗುವಾಗ ಮಳೆಯನ್ನು ಬಣ್ಣಿಸುವ ಬಗೆಯಾದರೂ ಎ0ತು? ಮಳೆ ಹನಿಗಳ ಮಾ0ತ್ರಿಕ ಶಕ್ತಿಯೇ ಒಂದು ವಿಸ್ಮಯ.

?ಅವರವರ ಭಾವಕ್ಕೆ ತಕ್ಕ0ತೆ ಕಣ್ಣೊಳಗೆ ಸಲೀಸಾಗಿ ಇಳಿದು ಎದೆಯೊಳಗೆ ಗುನುಗುತ್ತದೆ, ಕಲರವಗೈಯುತ್ತದೆ.ಈ ಮಳೆಗೆ ಮನಸ್ಸು ಮಗುವಾಗುತ್ತಿದೆ, ಬಾಲ್ಯ ತೆರೆದುಕೊಳ್ಳುತ್ತಲಿದೆ. ಕನಸುಗಳು ಮತ್ತೆ ಅರಳತೊಡಗಿವೆ. ಅಲ್ಲಿ ನೋಡಿ ಧೋ ಧೋ ಮಳೆ ಮುಸಲಾಧಾರೆಯಾಗಿ ಸುರಿಯುತ್ತಿದೆ. ಹಾದಿಯ ತು0ಬೆಲ್ಲಾ ಬಣ್ಣ ಬಣ್ಣದ ಕೊಡೆಗಳ ರ0ಗೋಲಿಯಂತ ಚೆಲುವು ಮೇಳೈಸಿವೆ, ಕೊಡೆಯೊಳಗೆ ಪಿಸುಗುಟ್ಟುತ್ತಿದೆ ಆಲಾಪಗಳ ಒಲವು. ಒದ್ದೆ ದಾರಿಯ ಮೇಲೊಂದು ಹೆಜ್ಜೆ ಇಡುವಾಗ ದಾರಿಯ ತು0ಬೆಲ್ಲಾ ನಿರ್ಜೀವ ಕೊಡೆಗೆ ಜೀವ0ತಿಕೆಯ ಮೆರುಗು. ಪುಟ್ಟ ಕೊಡೆಯೊ0ದು ಅಷ್ಟು ದೊಡ್ಡ ದೇಹವನ್ನು ಒದ್ದೆಯಾಗದ0ತೆ ನಡೆಸುತ್ತಿದೆಯಲ್ಲ. ಇದು ಕೊಡೆಯ ಹೊಣೆಗಾರಿಕೆಯಾ? ಯಾವ ಯೋಚನೆಗೂ ಸಿಲುಕಿಕೊಳ್ಳದೆ ಕೊಡೆಯೊಳಗಿನ ಮನ ಮಾತ್ರ ಮಳೆಯನ್ನೇ ಧ್ಯಾನಿಸುತ್ತಾ ಸಾಗುತ್ತಿರುತ್ತದೆ. ಮನಸ್ಸು ಮತ್ತು ಕನಸಿನ ನಡುವೆ ಮಳೆ ಕೊ0ಡಿಯಾಗುತ್ತಿದೆ. ತೆರೆದುಕೊ0ಡ ಕೊಡೆಯ ಸುತ್ತಲೂ ಮಳೆ ಸುರಿಯುತ್ತಾ ನರ್ತಿಸುತ್ತಿದೆ. ಮಳೆ ಎಂದರೆ ನೂರು ನೆನಪುಗಳ ತೇರು. ಮೆರವಣಿಗೆ ಹೊರಡಲು ತಯಾರಿ ನಡೆಸುತ್ತಿದೆ ನೆನಪುಗಳ ಲಹರಿ. ಮಳೆಯೆಂದರೆ ಬರೇ ಮಳೆಯಲ್ಲ, ಅದು ಬದುಕಿನ ಭಾವವೂ ಎನ್ನುವ ಭಾವ ಹುಟ್ಟಿಸುವಂತೆ ಪರಿಶುದ್ಧವಾಗಿ ತಾಧ್ಯಾತ್ಮತೆಯಿಂದ ಸುರಿಯತೊಡಗುವಂತದ್ದು. ಹನಿಯುವ ಮಳೆಯಲ್ಲಿ ಅದೃಶ್ಯವಾದ ಪ್ರೀತಿಯೊಂದು ಹಾಗೇ ಮೊಳಕೆಯೊಡೆದು ಎದೆಯ ಗೂಡಲ್ಲಿ ಬೆಚ್ಚಗೆ ಅವಿತು ಮುಲುಗುಟ್ಟಿದೆ.

?ಪ್ರಕೃತಿಯ ಮಡಿಲಲ್ಲಿ ಮನುಷ್ಯ ಮಗುವಾಗುತ್ತಾನೆ, ಗಿಡವಾಗುತ್ತಾನೆ, ಮರವಾಗುತ್ತಾನೆ, ನದಿಯಾಗುತ್ತಾನೆ, ತುಂತುರು ಹನಿಯಾಗುತ್ತಾನೆ, ತೆಳ್ಳನೆಯ ಮಂಜಾಗುತ್ತಾನೆ, ಕವಿಯಾಗುತ್ತಾನೆ, ಕಿವಿಯಾಗುತ್ತಾನೆ, ತಾನು-ತಾನಾಗುತ್ತಾನೆ. ಹೀಗೆ ಮಳೆಯನ್ನು ಅವರವರ ಭಾವಕ್ಕೆ ಸರಿಯಾಗಿ ವರ್ಣಿಸಬಹುದು. ಜನುಮ ಜನುಮದಲ್ಲೂ ಜೊತೆಗೆ ನಡೆವ ಕನಸ ಕಂಡು, ಎದೆಯ ತೋಟದಲ್ಲಿ ಪ್ರೀತಿ ಹೂವ ಬೆಳೆದು, ಬೆಂಕಿ ಮಳೆಗೆ ಬೆಂದು ಜೀವ ಸೊರಗಿದೆ... ಸಿಡಿಲು ಬಡೆದು ಎದೆಗೆ ಉರುಳಿತಲ್ಲ ಮನದರಮನೆಯು ಬಂಧಿ ನಾನು ವಿಧಿ ಸೆರೆಮನೆಯು ದಾರಿ ಮುಗಿದಿದೆ. ನನ್ನ ಮನದಲ್ಲೂ ಒಂದು ಮಳೆಯ ಮೋಡ ಹೆಪ್ಪುಗಟ್ಟುತಿದೆ

ಅದಕ್ಕೂ ಭುವಿಗೆ ಇಳಿದು ಮುತ್ತಾಗುವ ಆಸೆಯಾಗಿದೆ. ಹತಾಶನಾಗಿ ಬಂದ ಮಗನಿಗೆ ಸಾಂತ್ವನಿಸುವ ತಾಯಿ ಪ್ರೀತಿಯಂತೆ; ಹನಿ ಹನಿ ಈ ತುಂತುರುವಿನ ಎದೆಯ ಪ್ರತಿ ಹನಿಯಲ್ಲೂ ನಿನದೇ ಪ್ರತಿದ್ವನಿ. ನಿನ್ನ ಪಾಲಿಗೆ ನಾನು; ಮರೆತು ಹೋದ ಕನಸು, ತಪ್ಪಿ ಹೋದ ಟ್ರೇನು, ಇನ್ನೆಂದೂ ತಿರುಗಿ ಬರಲಾರದ ಸಮಯ, ಗುರುತೂ ಉಳಿಯದೇ ನಡೆದು ಹೋದ ಹೆಜ್ಜೆ. ಆ ಹೆಜ್ಜೆಯ ಗೆಜ್ಜೆನಾದದಿಂದಲೇ ಮೈ ಮರೆತ ಭಾವುಕ, ಸಾವಿರ ಸಾವಿರ ನೆನಪುಗಳಿವೆ. ಆ ನೆನಪುಗಳಿಗೆ ನನ್ನ ಸಾಂತ್ವನಿಸುವ ಶಕ್ತಿ ಇದೆ. ಬದುಕಿನಲ್ಲೂ ಕಾಮನಬಿಲ್ಲು ಮೂಡುವ ಸಂದರ್ಭ. ವಸಂತ ಮಾಸವಿಲ್ಲದೆ ಕೂಗುವ ಕೋಗಿಲೆ, ನೋವಿನ ಅಲೆಗಳಿಗೆ ಸಿಕ್ಕು ಕರಗಿ ಹೋದ ಕಲ್ಲು ಬಂಡೆಯಂತಹ ಕಷ್ಟ, ಮುಸುಕಿದ ಮೋಡದೊಳಗಿಂದ ಥಳ ಥಳಿಸುವ ಸೂರ್ಯ. ಇದಾವುದು ತುಂಬ ದೂರವಿಲ್ಲ. ಸಂಜೆ ಬಂದ ಮಳೆಗೆ ಕಾಲಿಗೆ ಮೆತ್ತಿದ ಮಣ್ಣಿನಲ್ಲೂ ಯಾವುದೋ ಘಮ, ಅದ ನೋಡಿ ಖುಷಿಯಾಗ್ತಿದೆ.

---

# ಅಹಂ ಎಂಬ ಭೂತ ನೆತ್ತಿಗೇರಿದಾಗ; ವಿವೇಕಕ್ಕೆ ಬಾಗಿಲು ಮುಚ್ಚುತ್ತದೆ!



| ಶಿವಬಸಪ್ಪ ಗು ಜಂಗಾಲಿ

ಮನುಷ್ಯನ ಜೀವನವನ್ನು ಮೇಲಕ್ಕೆತ್ತುವ ಶಕ್ತಿ ಅವನ ಜ್ಞಾನದಲ್ಲಿಲ್ಲ, ಅವನ ಹುದ್ದೆಯಲ್ಲಿಲ್ಲ, ಅವನ ಸಂಪತ್ತಿನಲ್ಲಿಯೂ ಇಲ್ಲ. ಅವನ ನಿಜವಾದ ಎತ್ತರ ಅವನ ವಿನಯದಲ್ಲಿದೆ. ಆದರೆ ವಿನಯದ ಸ್ಥಾನವನ್ನು ಅಹಂಕಾರ ಆಕ್ರಮಿಸಿಕೊಂಡ ಕ್ಷಣದಿಂದಲೇ, ಮನುಷ್ಯನ ಒಳಗಿದ್ದ ಬೆಳಕು ನಿಧಾನವಾಗಿ ಕತ್ತಲೆಯಾಗಿ ಬದಲಾಗುತ್ತದೆ. ಅಹಂ ಎಂಬ ಭೂತ ಒಮ್ಮೆ ನೆತ್ತಿಗೇರಿದರೆ, ಅದು ಕೇವಲ ವ್ಯಕ್ತಿಯ ಮಾತುಗಳನ್ನು ಮಾತ್ರ ಬದಲಾಯಿಸುವುದಿಲ್ಲ; ಅವನ ದೃಷ್ಟಿಕೋನ, ಸಂಬಂಧಗಳು, ನಿರ್ಧಾರಗಳು, ಬದುಕಿನ ದಿಕ್ಕು ಎಲ್ಲವನ್ನೂ ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತದೆ. ಆಗ ವಿವೇಕದ ಬಾಗಿಲು ನಿಧಾನವಾಗಿ ಮುಚ್ಚಿಕೊಳ್ಳುತ್ತದೆ.

ಅಹಂಕಾರಕ್ಕೆ ಕಣ್ಣುಗಳಿರುವುದಿಲ್ಲ. ಅದು ಕನ್ನಡಿಯಲ್ಲಿ ತನ್ನ ಮುಖವನ್ನಷ್ಟೇ ನೋಡುತ್ತದೆ; ಎದುರಿನವರ ಮನಸ್ಸನ್ನು ಎಂದಿಗೂ ನೋಡುವುದಿಲ್ಲ. ಅಹಂಕಾರದ ನೆರಳಿನಲ್ಲಿ ಬದುಕುವ ವ್ಯಕ್ತಿಗೆ ತನ್ನ ತಪ್ಪು ತಪ್ಪಾಗಿ ಕಾಣುವುದಿಲ್ಲ. ತನ್ನ ಮಾತೇ ಸತ್ಯ, ತನ್ನ ನಿರ್ಧಾರವೇ ಅಂತಿಮ, ತನ್ನ ಅಭಿಪ್ರಾಯವೇ ಶ್ರೇಷ್ಠ ಎಂಬ ಭ್ರಮೆಯಲ್ಲಿ ಅವನು ಬದುಕತೊಡಗುತ್ತಾನೆ. ಇದೇ ಭ್ರಮೆ ಅವನನ್ನು ನಿಧಾನವಾಗಿ ಏಕಾಂಗಿಯನ್ನಾಗಿ ಮಾಡುತ್ತದೆ.

ತುಂಬಿದ ನದಿ ಸದ್ದಿಲ್ಲದೆ ಹರಿಯುತ್ತದೆ. ಹಣ್ಣು ತುಂಬಿದ ಮರ ಬಾಗುತ್ತದೆ. ಜ್ಞಾನಿ ವಿನಯದಿಂದ ಮಾತನಾಡುತ್ತಾನೆ. ಆದರೆ ಖಾಲಿ ಪಾತ್ರೆಯೇ ಹೆಚ್ಚು ಸದ್ದು ಮಾಡುತ್ತದೆ. ಇದೇ ಪ್ರಕೃತಿಯ ಪಾಠ. ಮನುಷ್ಯ ಎಷ್ಟೇ ಎತ್ತರಕ್ಕೆ ಹೋದರೂ, ಅವನನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವುದು ಅಹಂಕಾರವಲ್ಲ; ವಿನಯ. ಇತಿಹಾಸದಲ್ಲಿ ಉಳಿದವರು ಅಧಿಕಾರದಿಂದ ಅಲ್ಲ, ಆದರ್ಶದಿಂದ ಉಳಿದವರು.

ಅಹಂಕಾರವು ಮೊದಲು ಸಂಬಂಧಗಳನ್ನು ನಾಶಮಾಡುತ್ತದೆ. ಪ್ರೀತಿಯಿಂದ ಆರಂಭವಾದ ಮಾತುಕತೆಗಳು ವಾದಗಳಾಗಿ ಮಾರ್ಪಡುತ್ತವೆ. ಆತ್ಮೀಯರು ದೂರವಾಗುತ್ತಾರೆ. ಮನೆಯೊಳಗೆ ನಗುವಿನ ಜಾಗದಲ್ಲಿ ಮೌನ ನೆಲೆಸುತ್ತದೆ. ಸ್ನೇಹದಲ್ಲಿ ಬಿರುಕು ಮೂಡುತ್ತದೆ. ಒಮ್ಮೆ ನಮ್ಮ ಜೊತೆಯಲ್ಲಿದ್ದವರು ನಮ್ಮ ನೆರಳನ್ನೇ ತಪ್ಪಿಸಲು ಪ್ರಾರಂಭಿಸುತ್ತಾರೆ. ಕಾರಣ ಒಂದೇ "ನಾನು" ಎನ್ನುವ ಪದ "ನಾವು" ಎನ್ನುವ ಪದವನ್ನು ಸೋಲಿಸಿಬಿಡುತ್ತದೆ.

ಒಂದು ಕ್ಷಣ ಯೋಚಿಸಿ ನೋಡಿ. ನಮ್ಮ ಜೀವನದಲ್ಲಿ ನಮ್ಮನ್ನು ಎಷ್ಟು ಜನರು ಬೆಳೆಸಿದ್ದಾರೆ? ತಾಯಿ ಮೊದಲ ಹೆಜ್ಜೆ ಕಲಿಸಿದಳು. ತಂದೆ ಬದುಕಿನ ದಾರಿ ತೋರಿಸಿದರು. ಗುರು ಜ್ಞಾನ ಕೊಟ್ಟರು. ಸ್ನೇಹಿತರು ಧೈರ್ಯ ತುಂಬಿದರು. ಸಮಾಜ ಅವಕಾಶ ನೀಡಿತು. ಇಷ್ಟೆಲ್ಲರ ಸಹಕಾರದಿಂದ ಬೆಳೆದ ನಾವು, "ಎಲ್ಲವೂ ನನ್ನಿಂದಲೇ" ಎಂದು ಹೇಳುವ ಕ್ಷಣವೇ ಅಹಂಕಾರದ ಆರಂಭ.

ಅಹಂಕಾರವು ಮನುಷ್ಯನಿಗೆ ತನ್ನ ಮಿತಿಯನ್ನೇ ಮರೆಸುತ್ತದೆ. ಯಶಸ್ಸು ಶಾಶ್ವತವಲ್ಲ ಎಂಬುದನ್ನು ಮರೆಯುವಂತೆ ಮಾಡುತ್ತದೆ. ಇಂದು ನಮ್ಮ ಬಳಿ ಇರುವ ಅಧಿಕಾರ, ಹಣ, ಹೆಸರು, ಕೀರ್ತಿ ಇವೆಲ್ಲವೂ ಕಾಲದ ಅತಿಥಿಗಳು. ಇಂದು ನಮ್ಮ



ಕೈಯಲ್ಲಿರುವುದು, ನಾಳೆ ಮತ್ತೊಬ್ಬರ ಕೈಯಲ್ಲಿರಬಹುದು. ಆದರೆ ವಿನಯ ಮಾತ್ರ ಕಾಲಕ್ಕೂ ಮೀರಿದ ಮೌಲ್ಯ.

ಜೀವನದ ದೊಡ್ಡ ಪಾಠಗಳನ್ನು ಕಲಿಸುವುದು ಪುಸ್ತಕಗಳಷ್ಟೇ ಅಲ್ಲ; ಸೋಲುಗಳೂ ಕಲಿಸುತ್ತವೆ. ಆದರೆ ಅಹಂಕಾರ ಇರುವವನು ಸೋಲಿನಿಂದ ಕಲಿಯುವುದಿಲ್ಲ. ಆತ ಸೋಲಿಗೂ ಮತ್ತೊಬ್ಬರನ್ನು ಹೊಣೆ ಮಾಡುತ್ತಾನೆ. ತನ್ನ ತಪ್ಪನ್ನು ಒಪ್ಪಿಕೊಳ್ಳಲು ಹೆದರುತ್ತಾನೆ. ತಪ್ಪನ್ನು ಒಪ್ಪಿಕೊಳ್ಳುವ ಧೈರ್ಯವೇ ನಿಜವಾದ ಬಲ. ಅದಿಲ್ಲದವನಿಗೆ ಬೆಳವಣಿಗೆ ಅಸಾಧ್ಯ.

ವಿವೇಕ ಎಂದರೆ ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಶಕ್ತಿ. ಅದು ಶಾಂತ ಮನಸ್ಸಿನಲ್ಲಿ ಹುಟ್ಟುತ್ತದೆ. ಆದರೆ ಅಹಂಕಾರ ಮನಸ್ಸನ್ನು ಅಶಾಂತಗೊಳಿಸುತ್ತದೆ. ಕೋಪವನ್ನು ಹೆಚ್ಚಿಸುತ್ತದೆ. ತಾಳ್ಮೆಯನ್ನು ಕಸಿದುಕೊಳ್ಳುತ್ತದೆ. ಪರಿಣಾಮವಾಗಿ ತೆಗೆದುಕೊಳ್ಳುವ ನಿರ್ಧಾರಗಳು ಬದುಕನ್ನೇ ಬದಲಾಯಿಸಿಬಿಡುತ್ತವೆ. ಒಂದು ಕ್ಷಣದ ಅಹಂಕಾರ, ಹಲವು ವರ್ಷಗಳ ಪಶ್ಚಾತ್ತಾಪಕ್ಕೆ ಕಾರಣವಾಗಬಹುದು. ಮಾತುಗಳಿಗೆ ಗಾಯ ಮಾಡುವ ಶಕ್ತಿಯೂ ಇದೆ, ಗಾಯ ಗುಣಪಡಿಸುವ ಶಕ್ತಿಯೂ ಇದೆ. ಅಹಂಕಾರದ ನಾಲಿಗೆಯಿಂದ ಹೊರಬರುವ ಮಾತುಗಳು ಕತ್ತಿಗಿಂತ ತೀಕ್ಷ್ಣ. ಅವು ದೇಹವನ್ನು ಅಲ್ಲ, ಮನಸ್ಸನ್ನು ಗಾಯಗೊಳಿಸುತ್ತವೆ. ಅಂತಹ ಗಾಯಗಳು ಕೆಲವೊಮ್ಮೆ ಜೀವಿತವಿಡೀ ಉಳಿಯುತ್ತವೆ. ಆದ್ದರಿಂದ ಮಾತನಾಡುವ ಮೊದಲು ವಿನಯವನ್ನು ನೆನಪಿಸಿಕೊಳ್ಳಬೇಕು.

ಪ್ರಕೃತಿ ನಮಗೆ ಪ್ರತಿದಿನ ಪಾಠ ಹೇಳುತ್ತದೆ. ಸೂರ್ಯ ಪ್ರತಿದಿನ ಉದಯಿಸುತ್ತಾನೆ; ಆದರೆ ತನ್ನ ಬಗ್ಗೆ ಹೆಮ್ಮೆಪಡುವುದಿಲ್ಲ. ಮಳೆ ಭೂಮಿಗೆ ಜೀವ ನೀಡುತ್ತದೆ; ಆದರೆ ಪ್ರತಿಫಲ ಕೇಳುವುದಿಲ್ಲ. ಮರ ಹಣ್ಣು ಕೊಡುತ್ತದೆ; ತನ್ನ ಹೆಸರನ್ನು ಫಲದ ಮೇಲೆ ಬರೆಯುವುದಿಲ್ಲ. ನದಿ ದಾಹ ನೀಗಿಸುತ್ತದೆ; ಯಾರಿಗೂ ತನ್ನ ಮಹತ್ವವನ್ನು ಸಾರುವುದಿಲ್ಲ. ಪ್ರಕೃತಿಯ ಈ ಮೌನ ಸೇವೆಯೇ ನಿಜವಾದ ಮಹತ್ವ.

ಇಂದು ಸಮಾಜದಲ್ಲಿ ಅನೇಕ ಸಮಸ್ಯೆಗಳ ಮೂಲ ಅಹಂಕಾರವೇ. ಕುಟುಂಬಗಳು ಒಡೆಯುತ್ತಿವೆ. ಸ್ನೇಹಗಳು ಮುರಿಯುತ್ತಿವೆ. ಸಂಸ್ಥೆಗಳು ಕುಸಿಯುತ್ತಿವೆ. ನಾಯಕತ್ವ ವಿಫಲವಾಗುತ್ತಿದೆ. ಎಲ್ಲೆಡೆ "ನಾನು" ಎನ್ನುವ ಶಬ್ದ ಹೆಚ್ಚಾಗಿದೆ; "ನಾವು" ಎನ್ನುವ ಭಾವ ಕಡಿಮೆಯಾಗಿದೆ. ಮಾನವೀಯತೆಯ ನೆಲೆ ವಿನಯ. ಅಹಂಕಾರ ಅದರ ಶತ್ರು.

ನಾವು ಬದುಕಿನಲ್ಲಿ ಎಷ್ಟು ಸಾಧಿಸಿದ್ದೇವೆ ಎಂಬುದಕ್ಕಿಂತ, ಎಷ್ಟು ಹೃದಯಗಳನ್ನು ಗೆದ್ದಿದ್ದೇವೆ ಎಂಬುದೇ ಮುಖ್ಯ. ಹಣದಿಂದ ಮನೆ ಕಟ್ಟಬಹುದು, ಆದರೆ ಸಂಬಂಧ ಕಟ್ಟಲಾಗುವುದಿಲ್ಲ. ಅಧಿಕಾರದಿಂದ ಜನರನ್ನು ಹೆದರಿಸಬಹುದು, ಆದರೆ ಗೌರವವನ್ನು ಬಲವಂತವಾಗಿ ಪಡೆಯಲಾಗುವುದಿಲ್ಲ. ಗೌರವವನ್ನು ಸಂಪಾದಿಸಬೇಕು. ಅದಕ್ಕೆ ದಾರಿ ವಿನಯ. ನಿಜವಾದ ನಾಯಕನು ತನ್ನ ಯಶಸ್ಸಿನ ಶ್ರೇಯಸ್ಸನ್ನು ತಂಡಕ್ಕೆ ನೀಡುತ್ತಾನೆ; ವಿಫಲತೆಯ ಹೊಣೆ ತನ್ನ ಮೇಲೆ ತೆಗೆದುಕೊಳ್ಳುತ್ತಾನೆ. ಇದೇ ನಾಯಕತ್ವ. ಆದರೆ ಅಹಂಕಾರಿ ವ್ಯಕ್ತಿ ಯಶಸ್ಸನ್ನು ತನ್ನದಾಗಿ ಘೋಷಿಸುತ್ತಾನೆ, ಸೋಲನ್ನು ಇತರರ ಮೇಲೆ ಹಾಕುತ್ತಾನೆ. ಈ ಮನೋಭಾವ ಅವನ ಪತನಕ್ಕೆ ಮೊದಲ ಮೆಟ್ಟಿಲಾಗುತ್ತದೆ.

ಮನುಷ್ಯನು ಪ್ರತಿದಿನ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತಾನೆ. ಆದರೆ ದಿನಕ್ಕೊಮ್ಮೆ ತನ್ನ ಮನಸ್ಸನ್ನೂ ನೋಡಬೇಕು. "ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದೆಯೇ?", "ನನ್ನ ವರ್ತನೆಯಲ್ಲಿ ಅಹಂಕಾರ ಬೆರೆತಿದೆಯೇ?", "ನನ್ನ ಯಶಸ್ಸು ನನ್ನನ್ನು ಮನುಷ್ಯರಿಂದ ದೂರ ಮಾಡುತ್ತಿದ್ದೆಯೇ?" ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಈ ಆತ್ಮಪರಿಶೀಲನೆಯೇ ವಿವೇಕದ ಬಾಗಿಲನ್ನು ತೆರೆದಿಡುತ್ತದೆ.

ಜೀವನದಲ್ಲಿ ಎಲ್ಲವನ್ನೂ ಗೆಲ್ಲಬಹುದು. ಆದರೆ ಅಹಂಕಾರವನ್ನು ಸೋಲಿಸಿದವನೇ ನಿಜವಾದ ವಿಜಯಿ. ತನ್ನನ್ನು ತಾನು ಜಯಿಸಿದವನಿಗೆ ಹೊರಗಿನ ಯಾವ ಗೆಲುವೂ ಕಷ್ಟವಲ್ಲ. ವಿನಯವನ್ನು ಅಲಂಕಾರವಾಗಿ ಧರಿಸಿದ ವ್ಯಕ್ತಿಗೆ ಜನರ ಹೃದಯದಲ್ಲಿ ಶಾಶ್ವತ ಸ್ಥಾನ ಸಿಗುತ್ತದೆ.

ಆದ್ದರಿಂದ ಬದುಕಿನಲ್ಲಿ ಯಶಸ್ಸು ಬಂದಾಗ ತಲೆ ಎತ್ತಿ ನಡೆಯಿರಿ; ಆದರೆ ಮೂಗು ಎತ್ತಿ ನಡೆಯಬೇಡಿ. ಸಾಧನೆ ನಿಮ್ಮ ಹೆಜ್ಜೆಯನ್ನು ಎತ್ತರಕ್ಕೆ ಕೊಂಡೊಯ್ಯಲಿ, ಅಹಂಕಾರ ನಿಮ್ಮ ತಲೆಯನ್ನು ಭಾರವಾಗಿಸದಿರಲಿ. ಗೌರವ ಕೇಳಿದರೆ ಸಿಗುವುದಿಲ್ಲ; ಕೊಟ್ಟರೆ ಮರಳಿ ಬರುತ್ತದೆ. ಪ್ರೀತಿ ಬೇಡಿಕೊಂಡರೆ ಉಳಿಯುವುದಿಲ್ಲ; ಹಂಚಿದರೆ ಹೆಚ್ಚುತ್ತದೆ. ವಿನಯ ದುರ್ಬಲತೆ ಅಲ್ಲ, ಅದು ವ್ಯಕ್ತಿತ್ವದ ಅತ್ಯುನ್ನತ ಶಕ್ತಿ.

ಅಹಂ ಎಂಬ ಭೂತ ನೆತ್ತಿಗೇರಿದಾಗ, ವಿವೇಕಕ್ಕೆ ಬಾಗಿಲು ಮುಚ್ಚುತ್ತದೆ. ಆದರೆ ವಿನಯ ಹೃದಯದಲ್ಲಿ ನೆಲೆಸಿದಾಗ, ಜ್ಞಾನಕ್ಕೆ ಕಿಟಕಿ ತೆರೆಯುತ್ತದೆ, ಸಂಬಂಧಗಳಿಗೆ ಹೊಸ ಉಸಿರು ಸಿಗುತ್ತದೆ, ಜೀವನಕ್ಕೆ ನಿಜವಾದ ಅರ್ಥ ದೊರೆಯುತ್ತದೆ. ಮನುಷ್ಯನ ಎತ್ತರವನ್ನು ಅಳೆಯುವುದು ಅವನ ಹುದ್ದೆಯಲ್ಲ, ಅವನ ಹೃದಯದ ವಿಶಾಲತೆಯಲ್ಲಿದೆ. ಆದ್ದರಿಂದ ಅಹಂಕಾರವನ್ನು ಅಲ್ಲ, ವಿನಯವನ್ನು ಬೆಳೆಸೋಣ; ಆಗ ಬದುಕು ಕೇವಲ ಯಶಸ್ವಿಯಾಗುವುದಲ್ಲ, ಸಾರ್ಥಕವಾಗುತ್ತದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,